# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.



1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038



ಸಂಪುಟ:02 • ಸಂಚಿಕೆ: 209 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 21.02.2025 • ಶುಕ್ರವಾರ • ಪುಟ:04 • ಬೆಲೆ:2

Volume:02 • Issue: 209 • PRGI No:KARKAN/2023/88055 • VIJAYANAGARA • 21.02.2025 • Friday • Page:04 • Rs:2


### ಹಂಪಿ ಟೈಮ್ಸ್ ಮತ್ತು ಶಾಲಾ ಶಿಕ್ಷಣ ಇಲಾಖೆ ಕಾರ್ಯಕ್ಕೆ ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಸಾರ್ವಜನಿಕರಿಂದಲೂ ಮೆಚ್ಚುಗೆ

# ಚೈತನ್ಯ ತುಂಬಿದ ವಿಷನ್ 625 ಕಾರ್ಯಾಗಾರ

### ಬಿಇಒ ಎಂ.ಚನ್ನಬಸಪ್ಪ ಹೇಳಿಕೆ | ವಿದ್ಯಾರ್ಥಿಗಳಲ್ಲಿ ಹೆಚ್ಚಿಸಿದ ಆತ್ಮವಿಶ್ವಾಸ | ಮಕ್ಕಳ ಗೊಂದಲ ನಿವಾರಿಸಿ ಟಿಪ್ಸ್ ನೀಡಿದ ಶಿಕ್ಷಕರು

### ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಮಾ.9 ರಂದು ಗೂಗಲ್ ಮೀಟ್ | ಮಾ.10ರಿಂದ ಆಯ್ದ ವಿದ್ಯಾರ್ಥಿಗಳಿಗೆ ಗ್ಯಾರಂಟಿ 625 ತರಬೇತಿ



**ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವೆ ಎಂಬ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು. ಶಿಕ್ಷಕರು ಹೇಳಿಕೊಟ್ಟ ಪಾಠವನ್ನು ಪುನರ್ಮನನ ಮಾಡಿಕೊಳ್ಳಬೇಕು. ಕಡಿಮೆ ಸಮಯದಲ್ಲಿ ಹೆಚ್ಚು ಬರವಣಿಗೆಯನ್ನು ರೂಢಿಸಿಕೊಂಡಲ್ಲಿ ಪರೀಕ್ಷೆಯಲ್ಲಿ ಅತ್ತಿತ್ತ ತಿರುಗಿನೋಡದೆ ಉತ್ತರ ಬರೆಯಲು ಸಾಧ್ಯವಾಗಲಿದೆ ಎಂದು ಕ್ಷೇತ್ರಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ ಹೇಳಿದರು.

ನಗರದ ಸ.ಪ.ಪೂ.ಬಾಲಕಿಯರ ಪ್ರೌಢಶಾಲಾ ವಿಭಾಗದ ಸಭಾಂಗಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ಹೊಸಪೇಟೆ ಮತ್ತು ಹಂಪಿ ಟೈಮ್ಸ್ ದಿನಪತ್ರಿಕೆ ಸಹಯೋಗದಲ್ಲಿ ಗುರುವಾರ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಎಸ್ಸೆಸ್ಸೆಲ್ಸಿ ವಿಷನ್–625 ವಿಶೇಷ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಸರ್ಕಾರಿ ಶಾಲೆಗಳಲ್ಲಿ ಸಮರ್ಥ ಶಿಕ್ಷಕರಿದ್ದಾರೆ. ಮಕ್ಕಳಲ್ಲಿ ಕಲಿಯುವ ಆಸಕ್ತಿಯೂ ಇದೆ. ಪಾಲಕರು ಕಲಿಯುವ ಮಕ್ಕಳಿಗೆ ಸಮರ್ಪಕ ವಾತವರಣ ನಿರ್ಮಿಸಿಕೊಡಬೇಕು. ಮಕ್ಕಳ ಉಜ್ವಲ ಭವಿಷ್ಯ ರೂಪಿಸಲು ಶಿಕ್ಷಕರ ಜೊತೆ ಪಾಲಕರ ಕೈಜೋಡಿಸಬೇಕು. ವಿಶೇಷ ಕಾರ್ಯಾಗಾರದಲ್ಲಿ ಪಾಲ್ಗೊಂಡ ತಾಲೂಕಿನ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಕನಸು ವಿಷನ್–625 ಆಗಿದ್ದು, ಅದನ್ನು ಸಾಕರಗೊಳಿಸುವ ಸಾಮರ್ಥ್ಯವೂ ವಿದ್ಯಾರ್ಥಿಗಳಲ್ಲಿದೆ ಎಂಬುದು ಅವರ ಉತ್ಸಾಹದಲ್ಲಿ ಕಂಡುಬರುತ್ತಿದೆ. ಈ ಬಾರಿಯ ಹಂಪಿ ಟೈಮ್ಸ್ ದಿನಪತ್ರಿಕೆ ಶೈಕ್ಷಣಿಕ ವರ್ಷದ ಆರಂಭದಿಂದಲೂ ತಜ್ಞ ಶಿಕ್ಷಕರ ಸಹಕಾರದೊಂದಿಗೆ ಪ್ರತಿನಿತ್ಯ ಕನ್ನಡ, ಗಣಿತ, ಇಂಗ್ಲೀಷ್, ವಿಜ್ಞಾನ, ಹಿಂದಿ ಹಾಗೂ ಸಮಾಜ ವಿಜ್ಞಾನ ವಿಷಯಗಳನ್ನು ಮಕ್ಕಳಿಗೆ ಸರಳವಾಗಿ ಅರ್ಥವಾಗುವ ನಿಟ್ಟಿನಲ್ಲಿ ಪ್ರಶ್ನೋತ್ತರಗಳನ್ನು ಪ್ರಕಟಿಸುತ್ತಾ ಬಂದಿದೆ. ವಿದ್ಯಾರ್ಥಿಗಳಲ್ಲಿ ಪರೀಕ್ಷೆ ಕುರಿತು ಯಾವುದೇ ಗೊಂದಲಗಳಿದ್ದಲ್ಲಿ ತಮ್ಮ ಶಾಲಾ ಶಿಕ್ಷಕರ ಬಳಿಯಾಗಲಿ, ವಿಷನ್ 625 ತಜ್ಞ ಶಿಕ್ಷಕರ ಬಳಿಯಾದರೂ ಕೇಳಿ ಪರಿಹರಿಸಿಕೊಳ್ಳಬಹುದು ಉತ್ತಮ ಫಲಿತಾಂಶ ನಿಮ್ಮದಾಗಿಸಿಕೊಳ್ಳಿ ಎಂದು ತಿಳಿಸಿದರು.

ಹಂಪಿ ಟೈಮ್ಸ್ ಸಂಪಾದಕ ಬಸಾಪುರ ಬಸವರಾಜ ಮಾತನಾಡಿ, ನಮ್ಮ ಪರಿಶ್ರಮದಿಂದ ಮಾತ್ರ ನಾವು ಏನನ್ನಾದರೂ ಸಾಧಿಸಲು ಸಾಧ್ಯ. ಅಸಾಧ್ಯ ಎನ್ನುವವರು ನಮ್ಮ ಸುತ್ತಲೂ ಸದಾ ಇರುತ್ತಾರೆ. ಆದರೆ ಅಸಾಧ್ಯ ಎನ್ನುವುದರಲ್ಲಿ ಮೊದಲಕ್ಷರವನ್ನು ಬಿಟ್ಟುಕೊಟ್ಟು ಉಳಿದೆರಡು ಅಕ್ಷರಗಳನ್ನು ನಮ್ಮದಾಗಿಸಿಕೊಳ್ಳಬೇಕು. ನಮ್ಮ ಸುತ್ತಲೂ ಸದಾ ನೆಗೆಟಿವ್ ಟಾಕ್‌ಗಳು ಇದ್ದರೂ ಕಿವಿಗೊಡದೇ ಪರಿಶ್ರಮಪಟ್ಟರೆ ಈ ಬಾರಿ ಫಲಿತಾಂಶ ನಮ್ಮದೆ ಆಗಲಿದೆ. ಇಂತಹ ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸಲು ಜಿಲ್ಲಾಡಳಿತ ಹಾಗೂ ಶಿಕ್ಷಣ ಇಲಾಖೆಯ ಸಹಕಾರದಿಂದ ಸಾಧ್ಯವಾಗಿದೆ ಎಂದರು.

ಮಕ್ಕಳು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ವಿಷಯವಾರು ಶಿಕ್ಷಕರು ಸಮರ್ಪಕವಾಗಿ ಉತ್ತರಿಸಿ, ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ನುಡಿಗಳಾಡಿದರು. ಪಠ್ಯ ಹಾಗೂ ಪಠ್ಯೇತರ ಗೊಂದಲಗಳಿಗೆ ಕಾರ್ಯಾಗಾರದಲ್ಲಿ ಮಕ್ಕಳು ಉತ್ತರ ಪಡೆದು ಸಂಭ್ರಮಿಸಿದರು. ಮುಖ್ಯಶಿಕ್ಷಕರುಗಳು, ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂಭ್ರಮದಿಂದ ಕಾರ್ಯಗರದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

ನಮ್ಮ ಎಲ್ಲಾ ಸಂಶಯಗಳಿಗೆ ಪರಿಹಾರ ದೊರಕಿದೆ. ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲು ಸಹಕಾರಿಯಾಗಿದೆ. ಹಂಪಿ ಟೈಮ್ಸ್ ನ ಮಾರ್ಗದರ್ಶಿ ನಿರಂತರವಾಗಿ ಓದುತ್ತಿರುವುದರಿಂದ ತುಂಬಾ ಅನುಕೂಲವಾಗಿದೆ. ಮುಖ್ಯ ಪರೀಕ್ಷೆಗೆ ಬಹುನಿರೀಕ್ಷಿತ ಪ್ರಶ್ನೆಗಳು ದೊರೆಯುತ್ತಿವೆ. ನನ್ನ ಗುರಿ 625

– ಎನ್.ಇಂದುಶ್ರೀ, ವಿದ್ಯಾರ್ಥಿನಿ
ಸ.ಭಾ..ಪ್ರೌ. ಶಾಲೆ, (ಮಾಪು), ಹೊಸಪೇಟೆ




ಹೊಸಪೇಟೆ ತಾಲೂಕಿನ 10ನೇ ತರಗತಿಯ ಪ್ರತಿ ಶಾಲೆಯ ಟಾಪ್ 5 ವಿದ್ಯಾರ್ಥಿಗಳಿಗೆ ಒಂದೇ ಸೂರಿನಡಿ ಕ್ಲಿಷ್ಟಕರವಾದ ವಿಷಯಗಳನ್ನು ಮುಕ್ತವಾಗಿ ಸಂವಾದದ ಮೂಲಕ ಸರಳೀಕರಿಸಿ ಪರಿಹರಿಸಿದ ಕಾರ್ಯಕ್ರಮ ಹೊಸತನದೊಂದಿಗೆ ಅದ್ಭುತವಾಗಿತ್ತು. ಈ ಕಾರ್ಯಕ್ರಮದಿಂದ ಈ ಬಾರಿಯ ಫಲಿತಾಂಶವು ಗುಣಾತ್ಮಕವಾಗಿರಲಿದೆ. ಮುಂದೆ ನಡೆಸುವಂತಹ 625 ಗ್ಯಾರಂಟಿ ಕಾರ್ಯಕ್ರಮವು ಕೂಡ ಉತ್ತಮವಾಗಿ ನೆರವೇರಲಿ.

– ಪ್ರವೀಣಾ ಬಿ ಹಲಗಣಿ, ಮುಖ್ಯೋಪಾಧ್ಯಾಯರು.
ಸ.ಬಾ..ಪ್ರೌ.ಢಶಾಲೆ, (ಮಾಪು), ಹೊಸಪೇಟೆ



ವಿಶೇಷ ಕಾರ್ಯಾಗಾರ ತುಂಬ ಉಪಯುಕ್ತವಾಗಿದೆ. ಶಿಕ್ಷಕರು ಉತ್ತಮ ಮಾರ್ಗದರ್ಶನ ಮಾಡಿದ್ದಾರೆ. ಜ್ಞಾನ ವಿಕಾಸಕ್ಕೆ ಮಾರ್ಗವಾಯಿತು.ಹಂಪಿ ಟೈಮ್ಸ್ ಮಾರ್ಗದರ್ಶಿ ಮುಂದುವರೆದರೆ ವಿದ್ಯಾರ್ಥಿಗಳಿಗೆ ತುಂಬಾ ಸಹಾಯವಾಗುತ್ತದೆ.

–ಶಿವಲೀಲಾ ವಿದ್ಯಾರ್ಥಿನಿ
ವಾಲ್ಮೀಕಿ ಪ್ರೌಢಶಾಲೆ, ಗಾದಿಗನೂರು



ನನಗೆ ಗೊತ್ತಿಲ್ಲದೆ ಅನೇಕ ವಿಷಯಗಳಿಗೆ ಮಾಹಿತಿ ಪಡೆದುಕೊಂಡೆ. ಹಂಪಿ ಟೈಮ್ಸ್‌ನಿಂದ ನನಗೆ ತುಂಬಾ ಅನುಕೂಲವಾಗಿದೆ.

–ಸಂಗೀತ ಎಂ. ವಿದ್ಯಾರ್ಥಿನಿ
ಸರ್ಕಾರಿ ಪ್ರೌಢಶಾಲೆ, ಪೋತಲಕಟ್ಟಿ







ಇಂದಿನ ವಿಜನ್ 625 ಕಾರ್ಯಾಗಾರವು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪೂರ್ಣ ಅಂಕ ಪಡೆಯಲು ಅತ್ಯುತ್ತಮ ವೇದಿಕೆ ಯಾಗಿತ್ತು. ಸ್ಥಳದಲ್ಲಿ ಪರಿಹಾರ ನೀಡುವ ವಿನೂತನ ಕಾರ್ಯಾಗಾರವನ್ನು ಕ್ಷೇತ್ರ ಶಿಕ್ಷಣಾಧಿ ಕಾರಿಗಳು ಹಾಗೂ ಹಂಪಿ ಟೈಮ್ಸ್ ಪತ್ರಿಕೆ ಮಹತ್ವದ ಹೆಜ್ಜೆ ಇಟ್ಟಿದ್ದು ಶ್ಲಾಘನೀಯ. ಒಟ್ಟಾರೆಯಾಗಿ ಇಂದಿನ ಕಾರ್ಯಾಗಾರವು ಮಕ್ಕಳ ಉತ್ತಮ ಸಾಧನೆಗೆ ಸಹಾಯಕವಾಗಿದೆ

– ಸಿದ್ದಪ್ಪ, ಶಿಕ್ಷಕರು, ಸರ್ಕಾರಿ ಆದರ್ಶ ವಿದ್ಯಾಲಯ ಹೊಸಪೇಟೆ



ಇಂದು SSLC ವಿದ್ಯಾರ್ಥಿಗಳಿಗಾಗಿ ನಡೆದ VISION 625 ವಿಶೇಷ ಕಾರ್ಯಾಗಾರವು ವಿದ್ಯಾರ್ಥಿಗಳಿಗೆ ಒಂದು ಬೂಸ್ಟರ್ ಡೋಸ್ ಕಾರ್ಯಾಗಾರವಾಗಿತ್ತು. ವಿದ್ಯಾರ್ಥಿಗಳೇ ನೇರವಾಗಿ ವಿಷಯ ಸಂಪನ್ಮೂಲ ವ್ಯಕ್ತಿಗಳಿಂದ ತಮ್ಮ ಅನುಮಾನಗಳಿಗೆ ಪರಿಹಾರ ಕಂಡುಕೊಂಡಿದ್ದು ವಿಶೇಷವಾಗಿತ್ತು.

B.N.ಶಿವಪ್ರಸಾದ, ಸಮಾಜ ವಿಜ್ಞಾನ ಶಿಕ್ಷಕರು
(ಸಂಪನ್ಮೂಲ ವ್ಯಕ್ತಿ), ಸರ್ಕಾರಿ ಪ್ರೌಢ ಶಾಲೆ (RMSA) ಕಾರಿಗನೂರು.







## ಎಸ್ಸೆಸ್ಸೆಲ್ಸಿ ವಿಷನ್ 625 ಕಾರ್ಯಾಗಾರ ವಿದ್ಯಾರ್ಥಿಗಳ ಅಭಿಪ್ರಾಯ



ನಮಗಿರುವ ಡೌಟ್‌ಗಳನ್ನು ಶಿಕ್ಷಕರು ಕ್ಲಿಯರ್ ಮಾಡಿದ್ದಾರೆ. ವಾರ್ಷಿಕ ಪರೀಕ್ಷೆಗೆ ಇದು ಸಹಕಾರಿಯಾಗಲಿದೆ. ಹಂಪಿ ಟೈಮ್ಸ್ ಮಾರ್ಗದರ್ಶಿ ನಮ್ಮ ಗೆಲುವಿನ ಮೆಟ್ಟಿಲು.

– **ಕೆ.ಯಶೋಧ** ವಿದ್ಯಾರ್ಥಿನಿ, ಪ್ರೌಢಶಾಲೆ, ಗಾದಿಗನೂರು

ಕಾರ್ಯಾಗಾರದಲ್ಲಿ ತುಂಬಾ ಮಾಹಿತಿ ದೊರೆತಿವೆ. ತುಂಬಾ ಸಹಕಾರಿಯೂ ಆಗಿದೆ.ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ. ಹಂಪಿ ಟೈಮ್ಸ್‌ನಲ್ಲಿ ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವಂತೆ ಮೂಡಿಬರುತ್ತಿದೆ. 625 ಅಂಕ ಗಳಿಸುವ ವಿಶ್ವಾಸವಿದೆ.

– **ಎನ್.ಉಷಾ,** ವಿದ್ಯಾರ್ಥಿನಿ, ಸ.ಭಾ..ಪ್ರೌ. ಶಾಲೆ, ಹೊಸಪೇಟೆ

ಎಲ್ಲಾ ಶಿಕ್ಷಕರು ವಿಷಯಗಳ ಕುರಿತು ಅರ್ಥವಾಗುವಂತೆ ವಿಶ್ಲೇಷಿಸಿ, ಅತ್ಯುಪಯುಕ್ತ ಮಾಹಿತಿ ನೀಡಿದ್ದಾರೆ. ಕಾನ್ಸೆಪ್ಟ್ ಅತ್ಯುತ್ತಮವಾಗಿದೆ. 625 ಅಂಕ ಗಳಿಸುವ ಗುರಿ ನನ್ನದಾಗಿದೆ.

–**ಶೇಕ್ ಫಹೀಮ್ ಉಲ್ ಜಾಫರ್** ವಿದ್ಯಾರ್ಥಿ ಟಿಎಂಎಇ ರೋಸ್‌ಬಡ್ ಶಾಲೆ, ಹೊಸಪೇಟೆ

ಇಂದಿನ ಕಾರ್ಯಾಗಾರದಲ್ಲಿ ಶಿಕ್ಷಕರು ನಮ್ಮೆಲ್ಲಾ ಡೌಟ್‌ಗಳನ್ನ ಕ್ಲಿಯರ್ ಮಾಡಿದ್ದಾರೆ. ನಮಗೆ ಉಪಯುಕ್ತವಾಗಯಿತು. ವಿಷನ್ 625 ಗುರಿಯೂ ನನ್ನದಾಗಿದೆ.

– **ಸಂಜನ ಎಸ್,** ವಿದ್ಯಾರ್ಥಿನಿ, ಎಲ್‌ಎಫ್‌ಎಸ್ ಪ್ರೌಢಶಾಲೆ, ಹೊಸಪೇಟೆ

ನನಗಿದ್ದ ಪರೀಕ್ಷೆ ಭಯ ಹೋಯಿತು.ಕಾರ್ಯಾಗಾರದಲ್ಲಿ ಶಿಕ್ಷಕರು ಮನಮುಟ್ಟುವಂತೆ ಮಾರ್ಗದರ್ಶನ ಮಾಡಿದ್ದಾರೆ. ಹಂಪಿ ಟೈಮ್ಸ್ ಪತ್ರಿಕೆಯಿಂದ ಹೆಚ್ಚು ಪ್ರಯೋಜನವಾಗಿದೆ.

–**ಬಿ.ಗಂಗೋತ್ರಿ,** ವಿದ್ಯಾರ್ಥಿನಿ, ಸರ್ಕಾರಿ ಪ್ರೌಢಶಾಲೆ, ಮಲಪನಗುಡಿ

ಇದೊಂದು ಅತ್ಯುತ್ತಮ ಕಾರ್ಯಾಗಾರ. ವಿದ್ಯಾರ್ಥಿಗಳ ಶೈಕ್ಷಣಿಕ ಬಲವರ್ಧನೆಗೆ ಸಹಕಾಯಕವಾಗಿದೆ. ಹಂಪಿ ಟೈಮ್ಸ್ ಮಾರ್ಗದರ್ಶಿ ವಿದ್ಯಾರ್ಥಿಗಳ ಮನೋದೈರ್ಯವನ್ನು ಹೆಚ್ಚಿಸಿದೆ

– **ಜೀವನ್ ಎಂ.** ವಿದ್ಯಾರ್ಥಿ, ಪಿವಿಎಸ್‌ಬಿಸಿ ಪ್ರೌಢಶಾಲೆ, ಹೊಸಪೇಟೆ.

ವಿಷನ್625 ಕಾರ್ಯಾಗಾರದಲ್ಲಿ ಪರೀಕ್ಷೆಗೆ ಉಪಯುಕ್ತವಾಗುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಹಂಪಿ ಟೈಮ್ಸ್ ಮಾರ್ಗದರ್ಶಿ ಪ್ರಶ್ನೋತ್ತರಗಳು ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆಯಲು ಸಹಕಾರಿಯಾಗಿವೆ.

– **ಕೆ.ಕಿರಣ್,** ವಿದ್ಯಾರ್ಥಿ, ಮುನ್ಸಿಫಲ್ ಪ್ರೌಢಶಾಲೆ, ಚಿತ್ತವಾಡ್ಗಿ

ಶಿಕ್ಷಕರು ಉತ್ತಮ ಹಾಗೂ ಮೌಲ್ಯಯುತ ಸಲಹೆಗಳನ್ನು ನೀಡಿದ್ದಾರೆ.ಹಂಪಿ ಟೈಮ್ಸ್‌ನಲ್ಲಿ ಅಪ್ಲೈಯಡ್ ಪ್ರಶ್ನೆಗಳು ಇರುತ್ತವೆ. ಅತ್ಯಂತ ಉಪಯುಕ್ತವಾಗಿದೆ.

– **ಸನಾ ಕೌಸರ್** ವಿದ್ಯಾರ್ಥಿನಿ ಸ.ಭಾ..ಪ್ರೌ. ಶಾಲೆ, (ಮಾಪು), ಹೊಸಪೇಟೆ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಅಧರಕು ಉದರಕು ಮಧುರಾಮೃತವೀ... ಜೇನು



ಬೆಳಗಿನ ಜಾವ ಎದ್ದು ನಿತ್ಯ ವಿಧಿಗಳನ್ನು ಪೂರೈಸುವ ಮುನ್ನ ಕೊಂಚ ಬೆಚ್ಚಗಿನ ನೀರಿನಲ್ಲಿ ಒಂದು ಚಮಚ ಜೇನುತುಪ್ಪ ಮತ್ತು ಒಂದಷ್ಟು ಹನಿ ನಿಂಬೆರಸವನ್ನು ಸೇರಿಸಿ ಸೇವಿಸಿದರೆ ದೇಹದ ತೂಕ ಖಂಡಿತವಾಗಿ ಇಳಿಮುಖವಾಗುತ್ತದೆ.... ದೈನಂದಿನ ಈ ಕ್ರಿಯೆ ಮುಂದುವರೆದರೆ ಋತು ಸಹಜವಾಗಿ ಬರುವ ನೆಗಡಿ, ಕೆಮ್ಮು, ಜ್ವರ ಮತ್ತಿತರ ದೇಹ ಬಾಧೆಗಳನ್ನು ತಡೆಯುವಷ್ಟು ರೋಗ ನಿರೋಧಕ ಶಕ್ತಿ ನಮ್ಮಲ್ಲಿ ಉತ್ಪತ್ತಿಯಾಗುತ್ತದೆ.

ನವಜಾತ ಶಿಶುವಿಗೆ ಹುಟ್ಟಿದ ಕೂಡಲೇ ತಾಯಿಯ ಅಧರಾಮೃತವನ್ನು ಸವಿಯುವ ಮುನ್ನ ಒಂದು ಹನಿ ಜೇನುತುಪ್ಪವನ್ನು ನಾಲಿಗೆಗೆ ನೆಕ್ಕಿಸುತ್ತಾರೆ ಅಂದರೆ ಜೇನುತುಪ್ಪದ ಮಹತ್ವದ ಅರಿವಾದೀತು ನಮಗೆ.

ನಮ್ಮ ಮನೆಯಲ್ಲಂತೂ ನೆಗಡಿ, ಕಫ,ಕೆಮ್ಮು ಗಂಟಲು ಕಿರಿಕಿರಿಗೆ ಒಂದು ಹಿಪ್ಪಲಿ ತುಂಡು ಮತ್ತು ಒಂದು ಲವಂಗವನ್ನು ಚೆನ್ನಾಗಿ ಅರೆದು ಒಂದು ಚಮಚ ಜೇನುತುಪ್ಪದಲ್ಲಿ ಬೆಳಗಿನ ಜಾವ ಸೇವಿಸಿದರೆ ಕೆಮ್ಮು ನೆಗಡಿಗಳು ಮಾಯವಾದರೆ ಕಫ ಕತ್ತರಿಸಿ ಹೋಗುತ್ತದೆ..... ತುಸು ಹೆಚ್ಚು ನೀರು ಸೇವಿಸಿದರೆ ಉಷ್ಣ ಕೂಡ ಬಾಧಿಸುವುದಿಲ್ಲ. ಬಹಳಷ್ಟು ತೊಂದರೆಗಳಿಗೆ ಜೇನುತುಪ್ಪ ರಾಮಬಾಣ.

ನೀರನ್ನು ಕೂಡ ಸೇರಿಸದ ಕೇವಲ ಹೂವಿನ ಮಕರಂದದಿಂದ ತಯಾರಿಸಲ್ಪಡುವ ಜೇನುತುಪ್ಪ ನೈಸರ್ಗಿಕ ಸಿಹಿಕಾರಕವಾಗಿದೆ. ಜೇನು ಹುಳುಗಳಿಂದ ತಯಾರಿಸಲ್ಪಡುವ ಈ ಜೇನುತುಪ್ಪವನ್ನು ಆಯುರ್ವೇದ ಶಾಸ್ತ್ರದಲ್ಲಿ ಮಧುರವಾದ ಅಮೃತ ಎಂದು ಕರೆಯಲಾಗಿದೆ.

ಅಧರಕ್ಕೆ ಸಿಹಿ, ಉದರಕ್ಕೆ ಔಷಧಿಯಾಗಿ ಪರಿಣಮಿಸುವ ಜೇನುತುಪ್ಪದ ಬಳಕೆ ಆಯುರ್ವೇದ ಔಷಧಿಗಳಲ್ಲಿ ಕಡ್ಡಾಯ ಎಂಬಂತೆ ಆಗಿದೆ. ಆಂಟಿ ಮೈಕ್ರೋಬಿಯಲ್, ಆಂಟಿ ಫಂಗಲ್ ಗುಣಗಳನ್ನು ಹೊಂದಿರುವ ಜೇನುತುಪ್ಪದ ಬಳಕೆ ಹಲವಾರು ದೈಹಿಕ ತೊಂದರೆಗಳಿಗೆ ಪರಿಹಾರ ನೀಡುತ್ತದೆ.

ಜೇನು ಹುಳು ಹೂವಿನಿಂದ ಹೂವಿಗೆ ಸಾಗಿ ಅವುಗಳ ಮಕರಂದವನ್ನು ಮಾತ್ರ ಸೇವಿಸಿ ಮರಳಿ ತನ್ನ ಸ್ಥಳಕ್ಕೆ ಬಂದು ಗೂಡಿನಲ್ಲಿ ಜೇನನ್ನು ತಯಾರಿಸುತ್ತದೆ. ಈ ಜೇನುತುಪ್ಪ ಪರಿಶುದ್ಧವಾದುದು ಎಂದು ಪರಿಗಣಿಸಲ್ಪಡುತ್ತದೆ. ದೇವರ ಪೂಜೆ ಮಾಡುವಾಗ ಅಭಿಷೇಕಕ್ಕೆ ಬೇಕಾಗುವ ಪಂಚ ದ್ರವ್ಯಗಳಲ್ಲಿ ಜೇನುತುಪ್ಪವೂ ಒಂದು ಎಂಬುದು ಅದರ ಶ್ರೇಷ್ಠತೆಯನ್ನು ಹೇಳುತ್ತದೆ.

**ಅಂತಹ ಜೇನುತುಪ್ಪದ ಕೆಲ ಉಪಯೋಗಗಳನ್ನು ನೋಡೋಣ.**

* ಈರುಳ್ಳಿಯನ್ನು ಚೆನ್ನಾಗಿ ಜಜ್ಜಿ ತೆಗೆದು ಸೋಸಿದ ರಸದೊಂದಿಗೆ ಜೇನುತುಪ್ಪವನ್ನು ಬೆರೆಸಿ ಔಷಧಿಯಂತೆ ಸೇವಿಸಿದರೆ ಕೆಮ್ಮು ಇನ್ನಿಲ್ಲದಂತೆ ಮಾಯವಾಗುತ್ತದೆ. ಈರುಳ್ಳಿಯ ಘಾಟನ್ನು ತಡೆಯಲು, ಔಷಧಿಯುಕ್ತ ಗುಣದ ಉಪಯುಕ್ತತೆಯನ್ನು ಪಡೆಯಲು ಮಧುರ ರುಚಿಯನ್ನು ಹೊಂದಿರುವ ಜೇನ ಹನಿ ಸಹಾಯಕವಾಗುತ್ತದೆ.
* ಚೆನ್ನಾಗಿ ನಿದ್ದೆ ಬರುತ್ತಿಲ್ಲ ಎಂದು ಒದ್ದಾಡುವವರು ಯಾವುದಾದರೂ ಹರ್ಬಲ್ ಟೀ ಯೊಂದಿಗೆ ಜೇನುತುಪ್ಪವನ್ನು ಬೆರೆಸಿ ಕುಡಿದರೆ ಒಳ್ಳೆಯ ಸೊಂಪಾದ ನಿದ್ರೆ ಖಂಡಿತ.
* ಹಲ್ಲು ನೋವಿದ್ದಾಗಲೂ ಕೂಡ ಒಂದು ಇಲ್ಲವೇ ಎರಡು ಲವಂಗಗಳನ್ನು ಜಜ್ಜಿ ಪುಡಿ ಮಾಡಿ ಜೇನುತುಪ್ಪದೊಂದಿಗೆ ಸೇವಿಸಿದರೆ ಹಲ್ಲು ನೋವು ಶಮನವಾಗುತ್ತದೆ.
* ಒಂದು ಚಮಚ ಜೇನುತುಪ್ಪದೊಂದಿಗೆ ಕಾಲು ಹೋಳು ನಿಂಬೆ ರಸವನ್ನು ಬೆರೆಸಿ ಸೇವಿಸಿದರೆ ಗಂಟಲಿನ ಕಿರಿಕಿರಿ ಮಾಯವಾಗುತ್ತದೆ.
* ಇನ್ನು ಆಗಾಗ ಅರೆ ತಲೆ ನೋವಿನಿಂದ ಬಳಲುವವರ ಸ್ಥಿತಿಯಂತೂ ಆ ದೇವರಿಗೇ ಪ್ರೀತಿ.... ಮುಖದ ಹಲವೆಡೆ ಗಳಲ್ಲಿ ಕಫದ ರೀತಿಯ ಶ್ಲೇಷ್ಮ ಸಂಗ್ರಹವಾಗಿ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಒಂದೇ ಸಮನೆ ತಲೆಯ ಅರ್ಧಭಾಗ ಸಿಡಿದಂತೆ ಭಾಸವಾಗುವ ಈ ಅರೆ ತಲೇನೋವು ಜೀವನವೇ ಬೇಡ ಎಂಬಷ್ಟು ಬೇಸರಕ್ಕೆ, ನೋವಿಗೆ ಈಡು ಮಾಡುತ್ತದೆ. ಅಂತಹವರ ಅರೆತಲೆನೋವಿಗೆ ಒಂದರ್ಧ ಚಮಚ ವಿನೆಗರ್ ಮತ್ತು ಒಂದು ಚಮಚ ಜೇನುತುಪ್ಪವನ್ನು ಸೇವಿಸಿದರೆ ಸಾಕು... ಅರೆ ತಲೆನೋವಿನಿಂದ ಮುಕ್ತಿ ದೊರೆಯುತ್ತದೆ. ಶುಂಠಿ ರಸದೊಂದಿಗೆ ಜೇನುತುಪ್ಪವನ್ನು ಸೇವಿಸಿದರೂ ಕೂಡ ತಲೆನೋವಿನಿಂದ ಮುಕ್ತಿ ಪಡೆಯಬಹುದು.

ಜೇನುತುಪ್ಪವು ಹಲವಾರು ಪೋಷಕಾಂಶಗಳು ಮತ್ತು ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ಇದು ಕಾರ್ಬೋಹೈಡ್ರೇಟ್‌ಗಳು, ಕ್ಯಾಲೋರಿಗಳು, ರಿಬೋಫ್ಲಾವಿನ್ ಮತ್ತು ತಾಮ್ರದಿಂದ ಸಮೃದ್ಧವಾಗಿದೆ. ಜೇನುತುಪ್ಪವು ಕೊಬ್ಬಿನ ಅಂಶವನ್ನು ಹೊಂದಿರುವುದಿಲ್ಲ ಆದ್ದರಿಂದ ನೀವು ಅದರ ಬಗ್ಗೆ ಚಿಂತಿಸಬೇಕಾಗಿಲ್ಲ. ಪ್ರೋಟೀನ್ ಮತ್ತು ನಾರಿನ ಅಂಶದೊಂದಿಗೆ, ಜೇನುತುಪ್ಪವು ಹೆಚ್ಚಿನ ಸಕ್ಕರೆ ಅಂಶವನ್ನು ಹೊಂದಿರುತ್ತದೆ. ಆದಾಗ್ಯೂ, ಜೇನುತುಪ್ಪದಿಂದ ಹೆಚ್ಚಿನ ಜೀವಸತ್ವಗಳು ಮತ್ತು ಖನಿಜಗಳನ್ನು ಪಡೆಯಲು, ನೀವು ಅದನ್ನು ಸರಿಯಾದ ಪ್ರಮಾಣದಲ್ಲಿ ಸೇವಿಸಬೇಕು ಎಂಬುದನ್ನು ನೀವು ಗಮನಿಸಬೇಕು, ಇದನ್ನು ಜನರು ಸಾಮಾನ್ಯವಾಗಿ ನಿರ್ಲಕ್ಷಿಸುತ್ತಾರೆ.

ಜೇನುತುಪ್ಪದಲ್ಲಿ ಇರುವ ಹೆಚ್ಚಿನ ಪ್ರಮಾಣದ ಉತ್ಕರ್ಷಣ ನಿರೋಧಕಗಳು ಹೃದಯದ ಆರೋಗ್ಯಕ್ಕೆ ಉತ್ತಮ ಮೂಲವಾಗಿದೆ. ಇದು ಹೃದಯ ಕಾಯಿಲೆಗಳ ಅಪಾಯಗಳನ್ನು ತಡೆಗಟ್ಟಲು, ಹೃದಯ ಬಡಿತವನ್ನು ಸುಧಾರಿಸಲು, ರಕ್ತದೊತ್ತಡದ ಮಟ್ಟವನ್ನು ಸಮತೋಲನಗೊಳಿಸಲು ಮತ್ತು ದೇಹದಲ್ಲಿನ ಕೆಟ್ಟ ಕೊಬ್ಬಿನಂಶವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಹೆಚ್ಚುವರಿಯಾಗಿ, ಜೇನುತುಪ್ಪದ ಮಿತ ಸೇವನೆಯು ಆಕ್ಸಿಡೇಟಿವ್ ಒತ್ತಡದಿಂದ ನಿಮ್ಮನ್ನು ದೂರವಿಡುತ್ತದೆ.

ಪ್ರತಿದಿನ ಜೇನುತುಪ್ಪ ತಿನ್ನುವುದರಿಂದ ನರವೈಜ್ಞಾನಿಕ ಸಮಸ್ಯೆಗಳಿಗೂ ಪ್ರಯೋಜನವಿದೆ. ಆತಂಕ, ಖಿನ್ನತೆ ಅಥವಾ ಸ್ಮರಣಶಕ್ತಿ ನಷ್ಟದ ವಿರುದ್ಧ ಹೋರಾಡುವ ಜನರು ಜೇನುತುಪ್ಪ ಸೇವನೆಯಿಂದ ಪ್ರಯೋಜನ ಪಡೆಯಬಹುದು.

ಜೇನುತುಪ್ಪವನ್ನು ತಿನ್ನುವುದರ ಪ್ರಯೋಜನಗಳ ಜೊತೆಗೆ, ಇದು ಕೆಲ ಸ್ಥಳೀಯ ಉಪಯೋಗಗಳನ್ನು ಸಹ ಹೊಂದಿದೆ. ಯುಗಯುಗಗಳಿಂದ, ಜನರು ಸುಟ್ಟಗಾಯಗಳು ಮತ್ತು ಶಸ್ತ್ರಚಿಕಿತ್ಸೆಯ ನಂತರದ ಗಾಯಗಳಿಗೆ ಚಿಕಿತ್ಸೆ ನೀಡಲು ಜೇನುತುಪ್ಪವನ್ನು ಬಳಸುತ್ತಿದ್ದಾರೆ.. ಜೇನುತುಪ್ಪದ ಬ್ಯಾಕ್ಟೀರಿಯಾ ವಿರೋಧಿ ಮತ್ತು ಆಂಟಿಮೈಕ್ರೊಬಿಯಲ್ ಕಾರ್ಯಗಳು ಕ್ರಮೇಣ ಪ್ರಗತಿಗಾಗಿ ಸಕ್ರಿಯಗೊಳ್ಳುವ ಸುಟ್ಟಗಾಯಗಳು ಮತ್ತು ಗಾಯಗಳಿಗೆ ಇದನ್ನು ಅನ್ವಯಿಸಬಹುದು.

ಆದಾಗ್ಯೂ, ಗಂಭೀರವಾದ ಸುಟ್ಟಗಾಯಗಳಿಗೆ, ಮನೆಮದ್ದುಗಳ ತ್ವರಿತ ಪರಿಹಾರ ಮತ್ತು ಚಿಕಿತ್ಸೆಯನ್ನು ನೀಡದಿರಬಹುದು, ಆದ್ದರಿಂದ ತಕ್ಷಣ ವೈದ್ಯರನ್ನು ಸಂಪರ್ಕಿಸುವುದು ಉತ್ತಮ.

ನಿಯಮಿತ ಸಕ್ಕರೆಗೆ ಪರ್ಯಾಯ

ಅಧಿಕ ರಕ್ತದ ಸಕ್ಕರೆಯಿಂದ ಬಳಲುತ್ತಿರುವ ಯಾರಾದರೂ ಜೇನುತುಪ್ಪ ಸೇವನೆಯಿಂದ ಪ್ರಯೋಜನ ಪಡೆಯಬಹುದು. ಜೇನುತುಪ್ಪ ಸೇವನೆಯು ಮಧುಮೇಹ ರೋಗಿಗಳಿಗೆ ಪ್ರಯೋಜನವನ್ನು ನೀಡುತ್ತದೆ ಮತ್ತು ಸಾಮಾನ್ಯ ಸಕ್ಕರೆಗೆ ಉತ್ತಮ ಪರ್ಯಾಯವಾಗಿದೆ.

ಕೆಮ್ಮು ಮತ್ತು ಶೀತಕ್ಕೆ ಪ್ರಾಚೀನ ಪರಿಹಾರ

ಜೇನುತುಪ್ಪವು ಹೆಚ್ಚು ಜನಪ್ರಿಯವಾಗಲು ಕಾರಣವೆಂದರೆ ಕೆಮ್ಮು ಮತ್ತು ಶೀತವನ್ನು ಗುಣಪಡಿಸಲು ಜೇನುತುಪ್ಪದಲ್ಲಿರುವ ನಿವಾರಕ ಅಂಶ. ಕೆಮ್ಮು ಮತ್ತು ಶೀತದ ಸಮಯದಲ್ಲಿ ಜೇನುತುಪ್ಪವು ನಿಮ್ಮ ಗಂಟಲಿಗೆ ಶಮನಕಾರಿ ಪದರವನ್ನು ಸೇರಿಸುತ್ತದೆ ಮತ್ತು ಅದು ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ರಾತ್ರಿಯಲ್ಲಿ ಜೇನುತುಪ್ಪವನ್ನು ತಿನ್ನುವುದರಿಂದ ಇದು ಒಂದು ಪ್ರಯೋಜನವಾಗಿದೆ.

ಜೇನುತುಪ್ಪದ ಅತ್ಯುತ್ತಮ ಭಾಗವೆಂದರೆ ಅದನ್ನು ಸೇವಿಸುವುದು ತುಂಬಾ ಸುಲಭ. ಇತರ ಯಾವುದೇ ಖಾದ್ಯಕ್ಕಿಂತ ಭಿನ್ನವಾಗಿ, ಜೇನುತುಪ್ಪವನ್ನು ತಿನ್ನುವುದು ಅಷ್ಟೇ ಖುಷಿಯನ್ನು ನೀಡುತ್ತದೆ. ನೀವು ಟೋಸ್ಟ್, ವೆನಿಲ್ಲಾ ಐಸ್ ಕ್ರೀಮ್, ಒಂದು ಬಟ್ಟಲು ಹಣ್ಣುಗಳು ಮತ್ತು ಕ್ರೀಮ್ ಅಥವಾ ಸಲಾಡ್‌ನಂತಹ ಹಲವಾರು ಖಾದ್ಯಗಳಿಗೆ ಜೇನುತುಪ್ಪವನ್ನು ಸೇರಿಸಬಹುದು. ಬೇರೇನೂ ಇಲ್ಲದಿದ್ದರೆ, ನೀವು ಅದನ್ನು ಸರಳವಾಗಿ ಅಥವಾ ಒಂದು ಲೋಟ ಬೆಚ್ಚಗಿನ ನೀರಿನಲ್ಲಿ ಸೇವಿಸಬಹುದು.

ಆಧರ ಮತ್ತು ಉದರಗಳಿಗೆ ಸಿಹಿಯಾಗಿರುವ ಜೇನುತುಪ್ಪದ ಹಲವಾರು ಉಪಯೋಗಗಳನ್ನು ಹರಿತಿರುವ ನಾವುಗಳು ನೈಸರ್ಗಿಕ ರುಚಿಕಾರಕವಾದ ಜೇನುತುಪ್ಪವನ್ನು ಬಳಸಿ ನಮ್ಮ ಆರೋಗ್ಯವನ್ನು ಕಾಯ್ದುಕೊಳ್ಳೋಣ... ಏನಂತೀರಾ?

# ಪುನರ್ವಿವಾಹದಲ್ಲಿ ತಪ್ಪು ಹುಡುಕುವುದು ಅಗತ್ಯವೇ?

ನಾವು ಸಮಾಜದಲ್ಲಿನ ಅನೇಕ ಕಟ್ಟು ಪಾಡುಗಳ ನಡುವೆ ಜೀವಿಸುತ್ತಿದ್ದೇವೆ. ಈ ಕಟ್ಟುಪಾಡನ್ನು ನಮಗೆ ನಾವೇ ವಿಧಿಸಿಕೊಂಡಿರುವುದು. ನಮ್ಮದು ಪುರುಷ ಪ್ರಧಾನ ಸಮಾಜ. ಕಾಲ ಎಷ್ಟೇ ಬದಲಾಗಿದ್ದರೂ, ಇಲ್ಲಿಯ ಜನರ ಮನಸ್ಥಿತಿ ಮಾತ್ರ ಬದಲಾ ಗದೇ ಇರುವುದು ವಿಪರ್ಯಾಸ.




ವಿಚ್ಛೇದನ ಅಥವಾ ವೈಧವ್ಯದ ನಂತರ ಮರು ವಿವಾಹ ಬಂಧನಕ್ಕೆ ಒಳಪಟ್ಟರೆ ಅದನ್ನು ಪುನರ್ ವಿವಾಹ ಎಂದು ಕರೆಯಲಾಗುತ್ತದೆ. ಈ ಪುರುಷ ಪ್ರಧಾನ ಸಮಾಜವು ಪುರುಷರು ವಿಚ್ಛೇದನವಾದ ಬಳಿಕ ಅಥವಾ ಹೆಂಡತಿ ಮರಣ ಹೊಂದಿದ ನಂತರ ಮರು ಮದುವೆಯಾದರೆ, ಯಾರೂ ಅದರ ಬಗ್ಗೆ ಮಾತನಾಡುವುದಿಲ್ಲ. ಅವನ ಮೇಲೆ ಅನುಕಂಪವಿರುತ್ತದೆ. ಆತನ ಮನೆ ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ ಪುನರ್ ವಿವಾಹ ಆದದ್ದೇ ಸರಿ ಎಂಬ ಧೋರಣೆಯನ್ನು ಮಾಡುತ್ತಾರೆ ಆದರೆ ಒಬ್ಬ ಮಹಿಳೆಯು ಚಿಕ್ಕ ವಯಸ್ಸಿಗೆ ಪತಿಯನ್ನು ಕಳೆದುಕೊಂಡು ಅಥವಾ ಅವನ ಮನೆಯವರ ಕಿರುಕುಳ ತಾಳಲಾರದೆ ವಿಚ್ಛೇದನ ಪಡೆದು ಒಂಟಿತನವನ್ನು ನೀಗಿಸಲು ಮರು ಮದುವೆಯಾದರೆ ಅವಳನ್ನು ಬೆರಳು ಮಾಡಿ ತೋರಿಸುತ್ತಾ ಹುಬ್ಬೇರಿಸಿ ನೋಡುತ್ತದೆ. ಈ ತಾರತಮ್ಯ ತರವಲ್ಲ ಹೆಣ್ಣಿಗೂ ಬದುಕಲು ಹಕ್ಕಿದೆ.

ಹೆಣ್ಣಿಗೆ ಮರುವಿವಾಹ ಆಗುವ ಆಯ್ಕೆ ಸ್ವಾತಂತ್ರ ಅವಳಿಗೆ ನೀಡಬೇಕು. ಜೀವನ ಸಾಂಗತ್ಯವನ್ನು ಬಯಸುತ್ತದೆ. ಆರ್ಥಿಕವಾಗಿ ಸಾಮಾಜಿಕವಾಗಿ ಮಾನಸಿಕವಾಗಿಯೂ ಜೊತೆಗಾರನಿರಲಿ ಎಂದು ಬಯಸುವುದು ಸಹಜ. ಸಮಾನ ಮನಸ್ಕ ಜೊತೆಗಾರ ಸಿಕ್ಕಿದರೆ ತನ್ನ ಮಕ್ಕಳನ್ನೂ ಆದರದಿಂದ ಕಾಣುವ ಸಂಗಾತಿ ಸಿಕ್ಕರೆ ಅವರ ಕೈ ಹಿಡಿಯುವುದು ಯಾವ ರೀತಿ ತಪ್ಪೂ ಅಲ್ಲ. ಆದರೆ ಇದರ ಆಯ್ಕೆಯ ಹಾಗೂ ಜವಾಬ್ದಾರಿಯ ಹೊಣೆ ಆಕೆಗೆ ಇರಬೇಕು. ಇದರಲ್ಲಿ ಸಮಾಜ ತಪ್ಪು ಹುಡುಕುವ ಯಾವ ಅಗತ್ಯವೂ ಇಲ್ಲ .

ಆದ್ದರಿಂದ ಹೆಣ್ಣಿಗಾಗಲಿ ಅಥವಾ ಗಂಡಿಗಾಗಲಿ ಪುನರ್ವಿವಾಹವನ್ನು ಒಂದು ಸಾಮಾಜಿಕ ಜವಾಬ್ದಾರಿ ಹಾಗೂ ಅಗತ್ಯದ ದೃಷ್ಟಿಯಿಂದ ಸಮಷ್ಟಿ ದೃಷ್ಟಿಯಲ್ಲಿ ನೋಡುವ ಮನೋಭಾವ ಎಲ್ಲರಲ್ಲೂ ಇರಬೇಕು. ಆಗ ಹೆಣ್ಣುಮಕ್ಕಳದ್ದಾಗಲಿ ಅಥವಾ ಸಂಗಾತಿ ಕಳೆದುಕೊಂಡ ಗಂಡಿಗಾಗಲಿ ಒಂದು ರೀತಿಯ ಆಸರೆ ಸುರಕ್ಷತಾ ಭಾವ ಹಾಗೂ ಒಂಟಿತನ ನೀಗುತ್ತದೆ. ಜೀವನ ಸಹನೀಯವೆನಿಸುತ್ತದೆ. ಸುರಕ್ಷತೆ ನಿಜವಾದ ಬೆಂಬಲ ಹಾಗೂ ಪೂರಕ ವಾತಾವರಣ ಸೃಷ್ಟಿಯಂತಹ ಪ್ರಯತ್ನಗಳಿಗೆ ನಿಜವಾದ ಅರ್ಥ ಸಲ್ಲುತ್ತದೆ.

~ **ಚೇತನ ಭಾರ್ಗವ, ಬೆಂಗಳೂರು**



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಡಾ. ಬಿ.ಎ. ವಿವೇಕ ರೈ ಅವರಿಗೆ ಪಂಪ ಪ್ರಶಸ್ತಿ

■ ಡಾ.ಬಿ.ಜಿ. ಕನಕೇಶಮೂರ್ತಿ



ಕನ್ನಡದ ಹೆಸರಾಂತ ಹಿರಿಯ ಲೇಖಕರು, ಜಾನಪದ ವಿದ್ವಾಂಸರು, ಸಂಶೋಧಕರು, ಅನುವಾದಕರು, ನಿವೃತ್ತ ಕನ್ನಡ ಪ್ರಾಧ್ಯಾಪಕರು ಮತ್ತು ಕನ್ನಡ ಹಾಗೂ ತುಳು ಭಾಷೆ, ಸಾಹಿತ್ಯಗಳಿಗೆ ಅಂತಾರಾಷ್ಟ್ರೀಯ ಮನ್ನಣೆಯನ್ನು ಗಳಿಸಿಕೊಟ್ಟಿರುವ ಡಾ. ಬಿ.ಎ. ವಿವೇಕ ರೈ ಅವರಿಗೆ 2024– 25 ನೇ ಸಾಲಿನ ಕನ್ನಡದ ಆದಿಕವಿ ಪಂಪನ ಹೆಸರಲ್ಲಿ ಕೊಡಮಾಡುವ ಕರ್ನಾಟಕ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ "ಪಂಪ ಪ್ರಶಸ್ತಿ" ಲಭಿಸಿರುವುದು ಕನ್ನಡ ಸಾರಸ್ವತ ಲೋಕಕ್ಕೆ ಹರ್ಷ ತಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಪುಣಚ ಗ್ರಾಮದ ಅಗ್ರಾಳದಲ್ಲಿ ಕೃಷಿಕ ಕುಟುಂಬದಲ್ಲಿ 08, ಡಿಸೆಂಬರ್ 1946ರಂದು ಜನಿಸಿದ ವಿವೇಕ ರೈ ಅವರ ತಂದೆ ಅಗ್ರಾಳ ಪುರಂದರ ರೈ. ವಿವೇಕ ರೈ ಅವರ ತಂದೆಯವರು ಕೆ.ಶಿವರಾಮ ಕಾರಂತರ ಶಿಷ್ಯ ಹಾಗೂ ಅಭಿಮಾನಿಯಾಗಿದ್ದರು. ಅಲ್ಲದೆ ಗಾಂಧಿವಾದಿ, ಸಾಹಿತಿ, ಪತ್ರಕರ್ತರೂ ಆಗಿದ್ದರು. ತಂದೆಯವರ ಪ್ರೇರಣೆ ಹಾಗೂ ಪ್ರೋತ್ಸಾಹ ಮತ್ತು ತಾಯಿಯವರು ಪುಸ್ತಕವಿಲ್ಲದೆ ಹಾಡುತ್ತಿದ್ದ ಕುಮಾರವ್ಯಾಸ ಭಾರತ ಹಾಗೂ ಜೈಮಿನಿ ಭಾರತದ ಪದ್ಯಗಳ ಕೇಳ್ಮೆಯ ಪರಿಣಾಮದಿಂದಾಗಿ ಸಾಹಿತ್ಯದಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡರು. ಚಿಕ್ಕಂದಿನಲ್ಲಿಯೇ ಕಾರಂತರ ಪುಸ್ತಕಗಳು ಅವರ ಮನೆಗೆ ಬರುತ್ತಿದ್ದರಿಂದ ಅವನ್ನು ವಿವೇಕ ರೈ ಓದುತ್ತಿದ್ದರಂತೆ.

ಪುಣಚ, ಪುತ್ತೂರುಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢವ್ಯಾಸಂಗದೊಂದಿಗೆ ಬಿ.ಎಸ್ಸಿ. ಪದವಿಯನ್ನು ಪೂರೈಸಿದರು. ತರುವಾಯ ಮೈಸೂರು ವಿಶ್ವವಿದ್ಯಾನಿಲಯದ ಮಂಗಳೂರು ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಎಂ.ಎ. 1970 ರಲ್ಲಿ ಮಾಡಿದರು. ತಾವು ವಿಜ್ಞಾನ ಪದವಿ ಪಡೆದಿದ್ದರೂ ಕನ್ನಡ ಎಂ.ಎ. ಮಾಡುವಲ್ಲಿಯೂ ಶಿವರಾಮ ಕಾರಂತರು 'ಎಂ ಎ ಗೆ ಸೀಟು ಸಿಕ್ಕಿದೆ ಸೇರಿಸಲೋ ಬೇಡವೋ' ಎಂದ ತಂದೆಯವರಿಗೆ ಹೇಳಿದ "ಸಾಹಿತಿಯಾಗ್ತಾನೋ ಇಲ್ಲವೋ, ಸಂಸ್ಕಾರವಂತೂ ಬರುತ್ತೆ ಕನ್ನಡ ಎಂ.ಎ. ಗೆ ಸೇರಿಸಿಬಿಡು" ಎಂಬ ಮಾತು ಪ್ರೇರಣೆಯೆಂದು ಹೇಳಿದ್ದಾರೆ. ಒಮ್ಮೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಹಾ.ಮಾ.ನಾಯಕರನ್ನು ಭೇಟಿಯಾದಾಗ 'ನೀವು ತುಳುವಿನಲ್ಲಿ ಏಕೆ ಕೆಲಸ ಮಾಡಬಾರದು' ಎಂಬ ಪ್ರೇರಣಾದಾಯಕ ನುಡಿ ತುಳು ಭಾಷೆ ಮತ್ತು ಸಾಹಿತ್ಯದ ಅಧ್ಯಯನ, ಸಂಶೋಧನೆಗೆ ಕಾರಣವಾಯಿತು. ಅವರ ಮಾರ್ಗದರ್ಶನದಲ್ಲೇ 1981 ರಲ್ಲಿ ಪಿಎಚ್. ಡಿ. ಪದವಿಗಾಗಿ ಸಂಶೋಧನೆ ಮಾಡಿದರು. ಅಲ್ಲದೆ ಕು. ಶಿ. ಹರಿದಾಸಭಟ್ಟರ ಸಹಕಾರ ಮತ್ತು ಪ್ರೋತ್ಸಾಹ ನೆರವಾದವು.

ಮಂಗಳೂರು ಸ್ನಾತಕೋತ್ತರ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಹಾಗೂ ಮುಖ್ಯಸ್ಥರಾಗಿ 34 ವರ್ಷಗಳ ಸುದೀರ್ಘ ಸೇವೆ ಸಲ್ಲಿಸುವುದರ ಜೊತೆಗೆ ಸಂಶೋಧನೆಯಲ್ಲೂ ಮಹತ್ವದ ಕಾರ್ಯಗಳನ್ನು ಮಾಡಿದ್ದಾರೆ.

2004–2007 ರವರೆಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ, 2007–2009 ರವರೆಗೆ ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ನಂತರ 2009 ರಿಂದ 2012ರವರೆಗೆ ಅತಿಥಿ ಪ್ರಾಧ್ಯಾಪಕರಾಗಿ ಜರ್ಮನಿಯ ಟ್ಯೂಬಿಂಗನ್ ವಿಶ್ವವಿದ್ಯಾಲಯ, ವ್ಯೂರ್ತ್ಸ್‌ಬರ್ಗ್, ಫಿನ್ಲೆಂಡ್ , ಜಪಾನ್, ಅಮೆರಿಕ, ಇಂಗ್ಲೆಂಡ್, ಪೋಲೆಂಡ್ ಮೊದಲಾದ ವಿದೇಶಗಳಲ್ಲಿ ಕನ್ನಡ ಮತ್ತು ತುಳು ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಧಾರ್ಮಿಕ ಪರಂಪರೆಗಳ ಕುರಿತು ಬೋಧನೆ ಹಾಗೂ ಉಪನ್ಯಾಸಗಳನ್ನು ನೀಡಿದ್ದಾರೆ. ಕಲಿಕಾ ಶಿಬಿರಗಳನ್ನು ನಡೆಸಿದ್ದಾರೆ ತಮ್ಮ ಹಲವಾರು ಸಂಶೋಧನಾ ಬರಹಗಳು ಮತ್ತು ವೈಚಾರಿಕ ಚಿಂತನೆಗಳಿಂದ ಅಂತಾರಾಷ್ಟ್ರೀಯ ವಿದ್ವಾಂಸರ ಗಮನವನ್ನು ಸೆಳೆದಿದ್ದಾರೆ.



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸ್ಥಾಪಕ ಅಧ್ಯಕ್ಷರಾಗಿ ರೈ ಅವರು ಮಾಡಿರುವ ಕೆಲಸ ಮಹತ್ವಪೂರ್ಣವಾದುದು. 'ತುಳು ಆಗಲಿ, ಕೊಂಕಣಿ ಆಗಲಿ ಕನ್ನಡವನ್ನು ಬಿಟ್ಟು ಅದಕ್ಕೆ ಅಸ್ತಿತ್ವವಿಲ್ಲ. ಭಾಷಾ ಅಕಾಡೆಮಿಗಳು ಯಾವುದೇ ಜಾತಿಗೆ ಸೀಮಿತವಾಗದೆ ಜಾತ್ಯತೀತವಾಗಿ ಅವುಗಳನ್ನು ಬೆಳೆಸುವುದು ಮುಖ್ಯ' ಎಂಬ ಧೋರಣೆಯೊಂದಿಗೆ ಅವರ ಕಾರ್ಯವೈಖರಿ ಮತ್ತು ಪ್ರಕಟಣೆಗಳು ಪ್ರಮುಖವೆನಿಸುತ್ತವೆ. ತುಳು ಗಾದೆಗಳು, ತುಳು ಒಗಟುಗಳು, ತೌಳವ ಸಂಸ್ಕೃತಿ, ತುಳುವ ಅಧ್ಯಯನ: ಕೆಲವು ವಿಚಾರಗಳು, ತುಳು ಜಾನಪದ ಸಾಹಿತ್ಯ, ಓರಲ್ ಟ್ರೆಡಿಶನ್ಸ್ ಇನ್ ಸೌತ್ ಇಂಡಿಯಾ ಎಪಿಕ್ಸ್, ತುಳು ಸಾಹಿತ್ಯ ಚರಿತ್ರೆ, ತುಳು ಕಬಿತಗಳು, ಶರಣರ 2500 ವಚನಗಳ ತುಳು ಅನುವಾದ ಈ ಮೊದಲಾದವು ರೈ ಅವರು ತುಳು ಭಾಷಾ ಸಾಹಿತ್ಯಕ್ಕೆ ನೀಡಿದ ಮಹತ್ವದ ಕೊಡುಗೆಗಳಾಗಿವೆ.

ಸಂಶೋಧನಾತ್ಮಕ, ವೈಚಾರಿಕ, ಅನುವಾದ, ಅಂಕಣ ಬರಹ–ಮೊದಲಾದ ಪ್ರಕಾರಗಳಲ್ಲಿ ಹಲವು ಕೃತಿಗಳನ್ನು ವಿವೇಕ ರೈ ಅವರು ರಚಿಸಿದ್ದಾರೆ. ಆನ್ವಯಿಕ ಜಾನಪದ, ಭಾರತೀಯ ಪರಂಪರೆ ಮತ್ತು ಸಾಹಿತ್ಯದಲ್ಲಿ ಒಗಟು (ಅನುವಾದ), ಸಂಸ್ಕೃತಿ ಚಿಂತನೆ ಕುರಿತಂತೆ ಗಿಳಿಸೂವೆ, ಇರುಳ ಕಣ್ಣು–ಅಂಕಣ ಬರಹಗಳು ಓದುಗರನ್ನು ತೀವ್ರವಾಗಿ ಆಕರ್ಷಿಸಿವೆ. ರಂಗಭೂಮಿಯನ್ನು ಕುರಿತು 'ರಂಗದೊಳಗಣ ಬಹಿರಂಗ' ಕನ್ನಡ ನಾಡು–ನುಡಿಯ ಬರಹಗಳು, ಜರ್ಮನಿಯ ಒಳಗಿಂದ, ಅನುವಾದಿತ ಕಥಾಸಂಕಲನ 'ಚಿಲಿಯಲ್ಲಿ ಭೂಕಂಪ', ಅನುವಾದಿತ ನಾಟಕ 'ನೆತ್ತರ ಮದುವೆ', 'ಅರಿವು ಸಾಮಾನ್ಯವೇ', 'ಕನ್ನಡ ದೇಸಿ ಸಮ್ಮಿಲನದ ನುಡಿಗಳು', 'ಬದುಕು ಕಟ್ಟಿದ ಬಗೆಗಳು', 'ಕ್ಯಾಮರಾ ಕಣ್ಣಿನಲ್ಲಿ ಜರ್ಮನಿ'– ಮೊದಲಾದವು ವಿವೇಕ ರೈ ಅವರ ಇತರ ಕೃತಿಗಳು. ತೇಜಸ್ವಿಯವರ 'ಕರ್ವಾಲೋ' ಕಾದಂಬರಿಯನ್ನು ಕ್ಯಾತ್ರಿನ್ ಬೈಂಡರ್ ಅವರೊಂದಿಗೆ ಜರ್ಮನ್ ಭಾಷೆಗೆ ಅನುವಾದ ಮಾಡಿರುವುದು, ಪ್ರೊ.ಸಿ.ಎನ್. ರಾಮಚಂದ್ರನ್ ಅವರೊಂದಿಗೆ 'ಕ್ಲಾಸಿಕಲ್ ಕನ್ನಡ ಪೊಯೆಟ್ರಿ ಅಂಡ್ ಪ್ರೋಸ್ : ರೀಡರ್', ಮತ್ತು 'ಮಿಡಿವಲ್ ಕನ್ನಡ ಲಿಟರೇಚರ್ ಎ ರೀಡರ್', ಜರ್ಮನಿಯ ಹೈಡ್ರನ್ ಬ್ರುಕ್ನರ್ ಅವರೊಟ್ಟಿಗೆ 'ಓರಲ್ ಟ್ರೆಡಿಷನ್ಸ್ ಇನ್ ಸೌತ್ ಇಂಡಿಯಾ : ಓಲ್ಡ್ ಎಪಿಕ್ಸ್', ಲೌರಿ ಹೊಂಕೋ,ಅನ್ನೆಲಿ ಹೊಂಕೋ, ಚಿನ್ನಪ್ಪಗೌಡ ಅವರೊಂದಿಗೆ ಸಂಪಾದಿಸಿದ – 'ಸಿರಿ ಎಪಿಕ್ ಆಸ್ ಪರ್ಫಾರ್ಮ್ಡ್ ಬೈ ಗೋಪಾಲ ನಾಯಕ, ಕಲ್ಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಸಿದ್ಧಪಡಿಸಿದ 'ಎ ಹ್ಯಾಂಡ್ ಬುಕ್ ಆಫ್ ಕನ್ನಡ ಪ್ರಾಸಿಡಿ' ಕೃತಿಗಳು ಕನ್ನಡ ಮತ್ತು ಇತರ ಭಾಷೆಗಳ ನಡುವೆ ನಿರ್ಮಾಣ ಮಾಡಿದ ಸಾಂಸ್ಕೃತಿಕ, ಸಾಹಿತ್ಯಕ ವಿಸ್ತರಣದ ಸೇತುವೆಗಳಾಗಿವೆ.

ಸಮಗ್ರ ಕನ್ನಡ ಜೈನ ಸಾಹಿತ್ಯ –19 ಸಂಪುಟಗಳು, ಮಂಗಳೂರು ದರ್ಶನ– 3 ಸಂಪುಟಗಳು, ರಾಘವಾಂಕನ ಸಮಗ್ರ ಕಾವ್ಯ, ಯಕ್ಷಗಾನ ಪ್ರಸಂಗ ಸಂಪುಟ, ಮಲೆ ಕುಡಿಯರು, ಮೊದಲಾದ ಸಂಪಾದನಾ ಕೃತಿಗಳು ರೈ ಅವರ ಸಾಹಿತ್ಯಾಧ್ಯಯನದ ವೈಶಾಲ್ಯತೆ, ಗಹನತೆಯ ಪ್ರತಿಬಿಂಬವಾಗಿವೆ .

ವಿವೇಕ ರೈ ಅವರ ಬಹುಮುಖೀ ಸಾಧನೆಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ, ಕರ್ನಾಟಕ ಜಾನಪದ ಅಕಾಡೆಮಿಯ 'ಜನಪದ ತಜ್ಞ ಪ್ರಶಸ್ತಿ', ತುಳು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಹಾ. ಮಾ. ನಾ. ಪ್ರಶಸ್ತಿ, ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಕಾರಂತ ಪ್ರಶಸ್ತಿ, 'ನೆತ್ತರ ಮದುವೆ' ಅನುವಾದ ಕೃತಿಗೆ ಕುವೆಂಪು ಭಾಷಾ ಭಾರತಿ ಪ್ರಶಸ್ತಿ –ಹೀಗೆ ಹಲವು ಗೌರವ ಪ್ರಶಸ್ತಿ, ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ. ಕರ್ನಾಟಕ ಜಾನಪದ ಸಮ್ಮೇಳನ, ಕರ್ನಾಟಕ ಸಂಸ್ಕೃತಿ ಸಮ್ಮೇಳನ, ಕರ್ನಾಟಕ ದೇಸಿ ಸಮ್ಮೇಳನ, ಕುವೈತ್ ತುಳು ಸಮ್ಮೇಳನ, ಆಳ್ವಾಸ್ ವಿಶ್ವ ನುಡಿಸಿರಿ ವಿರಾಸತ್ ಸಮ್ಮೇಳನಗಳ ಅಧ್ಯಕ್ಷ ಗೌರವಗಳ ಜೊತೆಗೆ ಇದೀಗ ಕರ್ನಾಟಕ ಸರ್ಕಾರದ ಪ್ರತಿಷ್ಠಿತ "ಪಂಪ ಪ್ರಶಸ್ತಿ" ಗೆ ಭಾಜನರಾಗಿರುವುದು ಕಿರೀಟಪ್ರಾಯವಾಗಿದೆ.

ಉನ್ನತ ಶಿಕ್ಷಣದ ಗುಣಮಟ್ಟ ಕುಸಿಯುತ್ತಿರುವುದನ್ನು ಕುರಿತಂತೆ ಡಾ. ಬಿ. ಎ. ವಿವೇಕ ರೈ ಅವರ ಚಿಂತನೆಗಳು ಗಮನೀಯವಾಗಿವೆ. 'ಉನ್ನತ ಶಿಕ್ಷಣ ಕುರಿತ ಚಿಂತನೆಗಳು ದುರ್ಬಲವಾಗಿವೆ. ಯಾವುದೇ ಸುಧಾರಣೆಗಳನ್ನು ತಂದರೂ ಅದು ಹೊರಮೈಯಲ್ಲಿ ಮಾತ್ರ ಬದಲಾವಣೆಯಾಗುತ್ತದೆ ಆಳವಾಗಿ ಆಗುತ್ತಿಲ್ಲ. ಇತರ ಕ್ಷೇತ್ರಗಳಲ್ಲಿನ ಉದಾರೀಕರಣದಂತೆ ಶಿಕ್ಷಣ ಸಂಸ್ಥೆಗಳು, ಬೋಧಕರು ಬೋಧನೆ, ಪರೀಕ್ಷೆ, ಮೌಲ್ಯಮಾಪನಗಳಲ್ಲಿ ಉದಾರೀಕರಣವನ್ನು ಅಳವಡಿಸಿಕೊಂಡುಬಿಟ್ಟಿದ್ದಾರೆ. ಶಿಕ್ಷಣ ಸಂಸ್ಥೆಗಳು ನ್ಯಾಕ್ ನಲ್ಲಿ ಉತ್ತಮ ಶ್ರೇಣಿ ಪಡೆಯಲು ಅನುಸರಿಸುತ್ತಿರುವ ಮಾರ್ಗಗಳು ಬೇರೆಯೇ ಆಗಿವೆ. ವಿದ್ಯಾರ್ಥಿಗಳ ನಿಜವಾದ ಮೌಲ್ಯಮಾಪನ ಸಾಧ್ಯವಾಗುತ್ತಿಲ್ಲ. ಪರೀಕ್ಷೆ, ಅಂಕ, ರಾಂಕ್– ಈ ಚಕ್ರದಿಂದ ಬಿಡಿಸಿ ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ಪ್ರಚೋದಿಸುವ ಪ್ರಯತ್ನಗಳು ಆಗಬೇಕು. ಬೋಧಕರು ನಿರಂತರ ಕಲಿಯುವ ಮನಃಸ್ಥಿತಿಯಿಂದ ದೂರವಾಗಿ ಪ್ರಾಧ್ಯಾಪಕರಾಗಿ ಬಡ್ತಿ ಪಡೆದರೆ ಸಾಕು, ಏನನ್ನೂ ಓದಬೇಕಿಲ್ಲ ಎಂಬ ಮನಃಸ್ಥಿತಿಗೆ ತಲುಪಿದ್ದಾರೆ. ಅವರು ಅದರಿಂದ ಹೊರ ಬರಬೇಕಾಗಿದೆ. ಅಂತೆಯೇ ವಿಶ್ವವಿದ್ಯಾಲಯಗಳು ಮೂರು ವರ್ಷಕ್ಕೊಮ್ಮೆ ಪಠ್ಯಕ್ರಮ ಬದಲಿಸಿದರೆ ಪ್ರಯೋಜನವಿಲ್ಲ. ಪರಂಪರೆ ಮತ್ತು ಆಧುನಿಕತೆಗಳ ಮೇಳೈಕೆಯೊಂದಿಗೆ ವರ್ತಮಾನ ಹಾಗೂ ಭವಿಷ್ಯತ್ತಿಗೆ ಉಚಿತವಾದ ಜ್ಞಾನವನ್ನು ಕಂಡುಕೊಳ್ಳುವ ತಲಸ್ಪರ್ಶಿ ಪ್ರಯತ್ನಗಳು, ಸಂಶೋಧನೆಗಳು ನಡೆಯಬೇಕಾಗಿದೆ. ಜನಪದದ ಬಗ್ಗೆ ಮಾತನಾಡುತ್ತಾ ಜನರನ್ನು ಹೊರಗಿಡುವ ಕ್ರಮ ವಿಶ್ವವಿದ್ಯಾಲಯಗಳಲ್ಲಿ ಬದಲಾಗಬೇಕು. ಅಧ್ಯಾಪಕರಾದವರು ತರಗತಿಯಲ್ಲಿ ತಾಳ್ಮೆಗೆಡಬಾರದು– ಈ ಮೊದಲಾದ ಅವರ ಚಿಂತನಾ ಕ್ರಮಗಳ ಕುರಿತು ಇಂದು ಚಿಂತನ ಮಂಥನಗಳು ಅಗತ್ಯ.

## ಕವಿ ಮನಸು

### ಭಗವಂತ ಬರೆದಿಟ್ಟ

ಆ ಭಗವಂತನೇ ಬರೆದಿಟ್ಟ
ಅವ ಬರೆದುದೆಲ್ಲವೂ ದಿಟ
ಈ ಭೂಮಿಯೊಳು ಬಂದಿವಿ
ಜೋಡಿಯಾಗಿ ಇಬ್ಬರು ಹೊಂಟಿವಿ।

ಸಹಜವಾಗಿ ಮಕ್ಕಳು ಮರಿ ಅದಾವು
ಅವುಗಳ ಲಾಲನೆ ಪಾಲನೆ ನಮ್ಮದು
ಬೆಳೆದರು ದೊಡ್ಡವರಾಗಿ ಬೆಳೆದು
ರೆಕ್ಕೆ ಬಂದಾಗ ಹಾರಿ ಹೋಗ್ಯಾವು।

ನನಗೆ ನೀನು ನಿನಗಾಗಿ ನಾನು
ವಿಧಿ ಬರೆದಿಟ್ಟ ಗಟ್ಟಿ ಕಾನೂನು
ಕಷ್ಟವೇ ಬರಲಿ ಕೂಡಿ ಬಾಳೋಣ
ಕಲ್ಲಿನಲ್ಲಿ ಮುಳ್ಳಿರಲಿ ದಾರಿ ಸವೆಸೋಣ।

ರೆಕ್ಕೆ ಬಲಿತ ಹಕ್ಕಿ ಅವು ಕಾಯೋದು ಬೇಡ
ಅವು ಮರಳಿ ಬರಲಾರವು ಚಿಂತೆ ಬೇಡ
ನನ್ನ ನೀ ಹಿಡಿದುಕೋ ನಿನ್ನ ನಾ
ಹಿಡಿಯುವೆ
ಜೋಲಿ ಹೋಗದಂತೆ ನಾ ಮುನ್ನಡೆಸುವೆ।

ನೆರಳಾಗಿ ಗಿಡ ಬಳ್ಳಿ ಮರ ಬಂಡೆಗಳಿವೆ
ಬೆಳಕಾಗಿ ಸೂರ್ಯ ಚಂದ್ರನ ಬೆಳಕಿವೆ
ಹೊಳೆ ನೀರು ತಿನ್ನಲು ಗಡ್ಡೆ ಗೆಣಸುಗಳಿವೆ
ಪಡೆದಷ್ಟೇ ಜೀವನ ಪಾವನ
ಎಂದುಕೊಳ್ಳುವೆ।

– ಚಂದ್ರಶೇಖರಯ್ಯ ರೋಣದಮಠ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 20–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1610.66 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9043 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 38.889 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1587.70 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 506 ಕ್ಯುಸೆಕ್ |
| ಸಾಮರ್ಥ್ಯ | 9.217 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

21–02–2025 – ಶುಕ್ರವಾರ

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ವ್ಯಾಘಾತ |
| ಕರಣ | : ಕೌಳವ |
| ಸೂರ್ಯೋದಯ | : 06:56:14 |
| ಸೂರ್ಯಾಸ್ತ | : 18:25:03 |
| ರಾಹು ಕಾಲ | : 11:15–12:41 |
| ಯಮಘಂಡ ಕಾಲ | : 15:33–16:59 |
| ಗುಳಿಕ ಕಾಲ | : 08:22–09:48 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

## ಸ್ಟುಡೆಂಟ್ ಕಾಲಂ

### ಸಾಧನೆಗೆ ಅಡ್ಡಿ ಯಾವುದಯ್ಯ



ನೆಲ್ಲು ಕುದುರೆ ಎಂಬ ಹಳ್ಳಿಯಲ್ಲಿ. ಒಂದು ಸುಂದರವಾದ ಕುಟುಂಬ ಇತ್ತು. ಆ ಕುಟುಂಬದಲ್ಲಿ ಇಬ್ಬರು ಗಂಡು ಮಕ್ಕಳು, ಒಬ್ಬಳೇ ಮಗಳು , ಅವರ ತಾಯಿ ಮನೆಯಲ್ಲಿ ಹೊಲಿಗೆ ಯಂತ್ರದಿಂದ ಬಟ್ಟೆ ಹೊಲಿಯುತ್ತಿದ್ದರು. ಮತ್ತು ಬೇರೆಯವರ ಹೊಲಕ್ಕೆ ಹೋಗಿ ಕೂಲಿ ಕೆಲಸ ಮಾಡುತ್ತಿದ್ದರು. ಅವರ ತಂದೆ ಆಟೋರಿಕ್ಷದ ಕೆಲಸ ಮಾಡುತ್ತಿದ್ದರು. ಇವರ ತಂದೆ ಮದ್ಯಪಾನದ ವ್ಯಸನಿಯಾಗಿದ್ದರು. ದಿನಾಲು ಮನೆಗೆ ಮದ್ಯಪಾನವನ್ನು ಸೇವಿಸಿ ಬಂದು ಜಗಳ ಮಾಡುತ್ತಿದ್ದರು. ಮತ್ತು ಮಗಳಿಗೆ ಓದಲು ಬಹಳ ಇಷ್ಟವಿದ್ದು

ಇದರಿಂದ ಅವಳಿಗೆ ಬಹಳ ಕಷ್ಟವಾಗುತ್ತಿತ್ತು ಅಲ್ಲದೆ ಅವರ ತಂದೆ ತಂದೆ ಮದ್ಯಪಾನವನ್ನು ಸೇವಿಸುವುದನ್ನು ಅವಳ ಶಾಲೆಯ ಗೆಳತಿಯರು ಇವಳಿಗೆ ಹೀಯಾಳಿಸುತ್ತಿದ್ದರು. ಇದರಿಂದ ಅವಳಿಗೆ ಬಹಳ ಮನಸ್ಸಿಗೆ ನೋವಾಗುತ್ತಿತ್ತು. ಅದಕ್ಕೆ ಇವಳು ಶಾಲೆಗೆ ಹೋಗುತ್ತಿರಲಿಲ್ಲ. ಮತ್ತು ಹೊಲದ ಕೆಲಸಕ್ಕೆ ಹೋಗುತ್ತಿದ್ದಳು. ಇವಳು ಕೆಲಸಕ್ಕೆ ಹೋಗುವುದನ್ನು ಕಂಡು ಶಿಕ್ಷಕರು ಅವಳ ಮನೆಗೆ ಬಂದು ಅವಳ ತಂದೆ ಬಳಿ ಕೇಳಿದರು. ಆದರೆ ಅವರ ತಂದೆ ಶಾಲೆಗೆ ಕಳಿಸುವುದಿಲ್ಲ ಎಂದು ಹೇಳಿದರು. ಆದರೆ ಇವರ ತಾಯಿಗೆ ಓದಿಸಲು ಇಷ್ಟವಿರುತ್ತದೆ. ಆದ್ದರಿಂದ ಅವರ ತಂದೆಗೆ ಗೊತ್ತಾಗದ ಹಾಗೆ ಅವಳನ್ನು ಬೇರೆ ಊರಿಗೆ ಕಳುಹಿಸುತ್ತಾರೆ. ಇವಳು ಬೇರೆ ಊರಿಗೆ ಹೋಗಿರುವುದು ತಂದೆಗೆ ಗೊತ್ತಾಗುತ್ತದೆ. ಆ ದಿನದಿಂದ ಮಗಳನ್ನು ಮಾತನಾಡಿಸುವುದನ್ನು ಬಿಟ್ಟು ಬಿಡುತ್ತಾನೆ. ಇವಳ ಗುರಿ ಐಪಿಎಸ್ ಆಗಬೇಕೆಂದು ಕನಸನ್ನು ಕಂಡುರುತ್ತಾಳೆ. ಆ ಕನಸಿನಂತೆ ಇವಳು ಚೆನ್ನಾಗಿ ಓದುತ್ತಿ ರುತ್ತಾಳೆ. ಅವಳಿಗೆ ಒಂದು ದಿನ ಇವಳ ತಾಯಿ ಹೇಳಿದ ಮಾತು ನೆನಪಾಗುತ್ತದೆ.



ನಿನ್ನ ಜೀವನದಲ್ಲಿ ಮುಂದುವರಿಯ ಬೇಕಿದ್ದರೆ ಎಂತಹ ಕಷ್ಟಗಳನ್ನು ಎದುರಿಸಿ ನಿಲ್ಲುವಂತ ಶಕ್ತಿ ನಿನ್ನಲ್ಲಿ ಇರಬೇಕು ಎಂದು ತನ್ನ ತಾಯಿ ಇವಳಿಗೆ ಹೇಳುತ್ತಾಳೆ. ಅದರಂತೆ ಇವಳು ಎಸ್ ಎಸ್ ಎಲ್ ಸಿ ಓದುತ್ತಿರುತ್ತಾಳೆ. ಬಹಳ ಕಷ್ಟಪಟ್ಟು ಓದಿ 10ನೇ ತರಗತಿಯಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆಯುತ್ತಾಳೆ ಈ ವಿಷಯ ತನ್ನ ತಂದೆಗೆ ಗೊತ್ತಾಗುತ್ತದೆ. ಅವಾಗ ತನ್ನ ತಂದೆ ದುಃಖದಿಂದ ನಿನ್ನ ಓದಿಸುವುದನ್ನು ಬಿಟ್ಟು ನಾನು ದೊಡ್ಡ ತಪ್ಪು ಮಾಡಿಬಿಟ್ಟಿದ್ದೆ. ಆದರೆ ನಿನ್ನ ತಾಯಿ ನನಗೆ ಗೊತ್ತಿಲ್ಲದ ಹಾಗೆ ನಿನ್ನನ್ನು ಓದಿಸಿ ಈ ಮಟ್ಟಕ್ಕೆ ಬರುವ ರೀತಿ ಮಾಡಿದ್ದಾಳೆ. ಈ ದಿನದಿಂದ ನಾನು ಮಧ್ಯಪಾನವನ್ನು ಸೇವಿಸಿದನ್ನು ಬಿಟ್ಟು ನಿನ್ನನ್ನು ಓದಿಸುತ್ತೇನೆ. ಅದು ಎಷ್ಟು ಕಷ್ಟವಾದರೂ ನಾನು ದುಡಿದು ನಿನ್ನ ಗುರಿಯನ್ನು ತಲುಪುವ ರೀತಿ ಮಾಡುತ್ತೇನೆ ಎಂದು ಹೇಳಿದರು. ಮತ್ತು ಇವಳು ಐಪಿಎಸ್ ಓದಬೇಕೆಂದು ಪಟ್ಟಣಕ್ಕೆ ಹೋಗಬೇಕಾಗುತ್ತದೆ ಹೋಗಲು ಬಹಳ ಹಣ ಬೇಕಾಗುತ್ತದೆ. ಅದನ್ನು ಕಂಡು ಮಗಳು ನಾನು ಓದುವುದು ಸಾಕು ಎಂದು ಹೇಳುತ್ತಾಳೆ. ಆದರೆ ತಂದೆ ತಾಯಿ ಬೇರೆಯವರ ಬಳಿ ಸಾಲ ಮಾಡಿ ಪಟ್ಟಣಕ್ಕೆ ಕಳಿಸುತ್ತಾರೆ. ಅವಳಿಗೆ ತುಂಬಾ ನೋವಾಗುತ್ತದೆ ನನ್ನ ತಂದೆ ತಾಯಿ ಮತ್ತು ಮನೆಯವರು ಬೇರೆಯವರ ಬಳಿ ಸಾಲ ಮಾಡಿ ನನ್ನನ್ನು ಕಳಿಸಿದ್ದಾರೆ ನಾನು ಐಪಿಎಸ್ ಪಾಸ್ ಮಾಡಲೇಬೇಕೆಂದು ಮನಸಿನಲ್ಲಿ ಹೇಳಿಕೊಳ್ಳುತ್ತಾಳೆ. ಅದರಂತೆ ಇವಳು ಹಗಲು ರಾತ್ರಿ ಅನ್ನದೆ ತುಂಬಾ ಚೆನ್ನಾಗಿ ಓದಿ ಐಪಿಎಸ್ ಪಾಸ್ ಮಾಡಿದಳು. ಆ ದಿನದಿಂದ ಅವಳು ಕನಸನ್ನು ನನಸು ಮಾಡುತ್ತಾಳೆ. ತಂದೆ ತಾಯಿ ಮತ್ತು ಮನೆಯವರು ತುಂಬಾ ಸಂತೋಷದಿಂದ ಕುಟುಂಬವು ಸಾಗುತ್ತದೆ.

ಸಿ. ಬಸಮ್ಮ, 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ, ಹಗರಿಬೊಮ್ಮನಹಳ್ಳಿ ತಾಲೂಕು

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI
ಈಗಿಂದಲೇ ಪುನರ್‌ಮನನ ಮಾಡಿ
ಪರೀಕ್ಷೆಗೆ ನಾವು ಸಿದ್ಧ 29 ದಿನ
https://epaper.hampitimes.com

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

ನಿನ್ನ ಏಳಿಗೆಗೆ ನೀನೇ ಶಿಲ್ಪಿ
ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ವಿಜ್ಞಾನ

ಭೌತವಿಜ್ಞಾನ [ಪುನರಾವರ್ತನೆ] ಮುಂದುವರೆದ ಭಾಗ ........

12. ವಾಹಕದ ರೋಧ ಎಂದರೇನು ? ವಾಹಕದ ರೋಧದ SI ಏಕಮಾನ ಯಾವುದು ?

ಉ : ವಿದ್ಯುತ್ ಪ್ರವಾಹಕ್ಕೆ ತಡೆಯುಂಟು ಮಾಡುವ ವಾಹಕದ ಗುಣಕ್ಕೆ ವಾಹಕದ ರೋಧ ಎನ್ನುವರು.

SI ಏಕಮಾನ : ಓಮ್ ($\Omega$)

13. ವಿದ್ಯುತ್ ಪ್ರವಾಹ ಎಂದರೇನು ? ವಿದ್ಯುತ್ ಪ್ರವಾಹ ಕಂಡುಹಿಡಿಯಲು ಬಳಸುವ ಗಣಿತೀಯ ಸೂತ್ರ ಬರೆಯಿರಿ ? ವಿದ್ಯುತ್ ಪ್ರವಾಹವನ್ನು ಅಳೆಯುವ ಸಾಧನವನ್ನು ಹೆಸರಿಸಿ ? ವಿದ್ಯುತ್ ಪ್ರವಾಹದ SI ಏಕಮಾನ ಯಾವುದು ?

ಉ : ವಿದ್ಯುತ್ ಆವೇಶ ಕಣಗಳ ಪ್ರವಹಿಸುವಿಕೆ ದರವೇ ವಿದ್ಯುತ್ ಪ್ರವಾಹ.

ಗಣಿತೀಯ ಸೂತ್ರ : $I = \frac{Q}{t}$

ಅಳೆಯುವ ಸಾಧನ : ಅಮ್ಮೀಟರ್,

SI ಏಕಮಾನ : ಆಂಪಿಯರ್ (A)

14. ವಿದ್ಯುತ್ ವಿಭವಾಂತರ ಎಂದರೇನು ? ವಿದ್ಯುತ್ ವಿಭವಾಂತರ ಕಂಡುಹಿಡಿಯಲು ಬಳಸುವ ಗಣಿತೀಯ ಸೂತ್ರ ಬರೆಯಿರಿ ? ವಿದ್ಯುತ್ ವಿಭವಾಂತರ ಅಳೆಯುವ ಸಾಧನವನ್ನು ಹೆಸರಿಸಿ ? ವಿದ್ಯುತ್ ವಿಭವಾಂತರದ SI ಏಕಮಾನ ಯಾವುದು ?

ಉ : ಒಂದು ಏಕಮಾನ ಆವೇಶವನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ ಆಗುವ ಕೆಲಸವೇ ವಿಭಾವಂತರ.

ಗಣಿತೀಯ ಸೂತ್ರ: $V = \frac{W}{Q}$

ಅಳೆಯುವ ಸಾಧನ: ವೋಲ್ಟ್ ಮೀಟರ್,

SI ಏಕಮಾನ: ವೋಲ್ಟ್ (V)

15. ವಿದ್ಯುತ್ ಸಾಮರ್ಥ್ಯ ಎಂದರೇನು ? ವಿದ್ಯುತ್ ಸಾಮರ್ಥ್ಯ ಕಂಡುಹಿಡಿಯಲು ಬಳಸುವ ಗಣಿತೀಯ ಸೂತ್ರ ಬರೆಯಿರಿ ? ವಿದ್ಯುತ್ ಸಾಮರ್ಥ್ಯದ SI ಏಕಮಾನ ಮತ್ತು ವ್ಯಾವಹಾರಿಕ ಏಕಮಾನ ಯಾವುದು ?

ಉ : ವಿದ್ಯುತ್ ಮಂಡಲದಲ್ಲಿ ಶಕ್ತಿ ಬಳಕೆಯಾಗುವ ದರ ಅಥವಾ ಕ್ಷೀಣಿಸುವ ದರವೇ ವಿದ್ಯುತ್ ಸಾಮರ್ಥ್ಯ.

ಗಣಿತೀಯ ಸೂತ್ರ : $P = \frac{V}{I} = I^2R = \frac{V^2}{R}$

SI ಏಕಮಾನ : ವ್ಯಾಟ್ (W)

ವ್ಯಾವಹಾರಿಕ ಏಕಮಾನ : ಕಿಲೋ ವ್ಯಾಟ್ ಘಂಟೆ (kwh)

16. ಗೃಹಬಳಕೆಯ ವಿದ್ಯುತ್‌ಮಂಡಲಗಳ ಜೋಡಣೆಯಲ್ಲಿ ಸರಣಿಕ್ರಮ ವ್ಯವಸ್ಥೆಯನ್ನು ಬಳಸಲಾಗುವುದಿಲ್ಲ. ಏಕೆ?

ಉ : ಸರಣಿ ಜೋಡಣೆಯಲ್ಲಿ ವಿದ್ಯುತ್ ಮಂಡಲದಲ್ಲಿ ಹರಿಯುವ ವಿದ್ಯುತ್ ಪ್ರವಾಹವು ಎಲ್ಲಾ ಭಾಗದಲ್ಲಿಯೂ ಸ್ಥಿರವಾಗಿರುತ್ತದೆ. ಆದ ಕಾರಣ ವಿದ್ಯುತ್ ಪ್ರವಾಹದ ಒಂದೇ ಮೌಲ್ಯದಲ್ಲಿ ವಿಭಿನ್ನ ಉಪಕರಣಗಳು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಯಾವುದಾದರೂ ಒಂದು ಘಟಕ ಅಥವಾ ಉಪಕರಣ ವಿಫಲವಾದರೆ ಮಂಡಲವು ಮುರಿದು ಹೋಗುತ್ತದೆ. ಮುಂದಿನ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ.

17. ವಿದ್ಯುತ್ ಮಂಡಲ ಎಂದರೇನು ? ವಿದ್ಯುತ್ ಮಂಡಲದಲ್ಲಿ ಅಮ್ಮೀಟರ್ ಮತ್ತು ವೋಲ್ಟ್ ಮೀಟರ್ ಅನ್ನು ಹೇಗೆ ಜೋಡಿಸಿರುತ್ತಾರೆ ?


ಉ : ವಿದ್ಯುತ್ ಪ್ರವಾಹದ ನಿರಂತರ ಮತ್ತು ಆವೃತ ಮಂಡಲವನ್ನು ವಿದ್ಯುತ್ ಮಂಡಲ ಎನ್ನುವರು.

ವಿದ್ಯುತ್ ಮಂಡಲದಲ್ಲಿ ಅಮ್ಮೀಟರನ್ನು ಯಾವಾಗಲೂ ಸರಣಿ ಕ್ರಮದಲ್ಲಿ ಜೋಡಿಸಿರುತ್ತಾರೆ

ವೋಲ್ಟ್ ಮೀಟರ್ ಅನ್ನು ಯಾವಾಗಲೂ ಸಮಾಂತರವಾಗಿ ಜೋಡಿಸಲಾಗುತ್ತದೆ

18. ಕೊಟ್ಟಿರುವ ಚಿತ್ರವನ್ನು ಗಮನಿಸಿ, ಚಿತ್ರವು ಸೂಚಿಸುವ ದೃಷ್ಟಿ ದೋಷವನ್ನು ಹೆಸರಿಸಿ. ಈ ದೃಷ್ಟಿದೋಷಕ್ಕೆ ಕಾರಣ ಹಾಗೂ ಅದರ ಲಕ್ಷಣಗಳು ಮತ್ತು ಆ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರವನ್ನು ತಿಳಿಸಿ

ಉ : ಸಮೀಪ ದೃಷ್ಟಿ (ಮಯೋಪಿಯ)



ಕಾರಣ : • ಕಣ್ಣಿನ ಮಸೂರದ ವಿಪರೀತ ವಕ್ರತೆ

• ಕಣ್ಣು ಗುಡ್ಡೆಯು ಸಹಜಸ್ಥಿತಿಗಿಂತ ಉದ್ದವಾಗಿರುವುದು.

ಲಕ್ಷಣಗಳು : ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿದೆ. ದೂರದೃಷ್ಟಿ ಹೊಂದಿದ ವ್ಯಕ್ತಿ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿಲ್ಲ.

ಈ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರ – ನಿಮ್ನ ಮಸೂರ.

19. ಕಣ್ಣಿನ ಹೊಂದಾಣಿಕೆ ಸಾಮರ್ಥ್ಯ ಎಂದರೇನು ? ಸಾಮಾನ್ಯ ದೃಷ್ಟಿಯುಳ್ಳವರಿಗೆ ದೂರ ಬಿಂದು ಮತ್ತು ಸಮೀಪ ಬಿಂದುಗಳಾವುವು?

ಉ : ಕಣ್ಣಿನ ಮಸೂರದ ಸಂಗಮ ದೂರವನ್ನು ಹೊಂದಾಣಿಕೆ ಮಾಡುವ ಕಣ್ಣಿನ ಮಸೂರದ ಸಾಮರ್ಥ್ಯವನ್ನು ಕಣ್ಣಿನ ಹೊಂದಾಣಿಕೆ ಇರುತ್ತೇವೆ.

• ದೂರ ಬಿಂದು– ಅನಂತ ದೂರ

• ಸಮೀಪ ಬಿಂದು– 25 ಸೆಂ.ಮೀ

20. ಮಾನವನ ಕಣ್ಣಿನಲ್ಲಿರುವ ಮಸೂರವು ಹತ್ತಿರದ ವಸ್ತುಗಳನ್ನು ಮತ್ತು ದೂರದ ವಸ್ತುಗಳನ್ನು ನೋಡಲು ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ ? ವಿವರಿಸಿ.

ಉ : ಸಿಲಿಯರಿ ಸ್ನಾಯುಗಳು ಹಿಗ್ಗಿದಾಗ ಮಸೂರದ ವಕ್ರತೆ ಕಡಿಮೆಯಾಗುತ್ತದೆ ಮತ್ತು ತೆಳ್ಳಗಾಗುತ್ತದೆ. ಆಗ ಮಸೂರದ ಸಂಗಮದೂರವು ಹೆಚ್ಚಾಗುತ್ತದೆ ಮತ್ತು ದೂರದ ವಸ್ತುಗಳ ಸ್ಪಷ್ಟವಾಗಿ ಗೋಚರಿಸುತ್ತವೆ.

ಸಿಲಿಯರಿ ಸ್ನಾಯುಗಳು ಕುಗ್ಗಿದಾಗ ಮಸೂರದ ವಕ್ರತೆ ಹೆಚ್ಚಾಗುತ್ತದೆ ಮತ್ತು ದಪ್ಪವಾಗುತ್ತದೆ. ಆಗ ಮಸೂರದ ಸಂಗಮದೂರವು ಕಡಿಮೆ ಆಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

21. ನಿಸರ್ಗದಲ್ಲಿ ಕಾಮನಬಿಲ್ಲು ಹೇಗೆ ಉಂಟಾಗುತ್ತದೆ ? ವಿವರಿಸಿ.

ಉ : • ವಾತಾವರಣದಲ್ಲಿರುವ ನೀರಿನ ಸಣ್ಣ ಹನಿಗಳು ಕಿರು ಪಟ್ಟಕದಂತೆ ವರ್ತಿಸುತ್ತವೆ.


• ಅವು ಸೂರ್ಯನ ಪತನ ಕಿರಣಗಳನ್ನು ವಕ್ರೀಭವನಗೊಳಿಸಿ ಚದುರಿಸುತ್ತವೆ.

• ನಂತರ ಆಂತರಿಕವಾಗಿ ಪ್ರತಿಫಲಿಸುತ್ತವೆ.

• ಅಂತಿಮವಾಗಿ ನೀರಿನ ಹನಿಗಳಿಂದ ಹೊರಬರುವಾಗ ವಕ್ರೀಭವನ ಹೊಂದುತ್ತವೆ.

ಬೆಳಕಿನ ಈ ರೀತಿಯ ವರ್ಣವಿಭಜನೆಯಿಂದ ಕಾಮನಬಿಲ್ಲು ಉಂಟಾಗುತ್ತದೆ.

22. ಕೊಟ್ಟಿರುವ ಚಿತ್ರವನ್ನು ಗಮನಿಸಿ, ಚಿತ್ರವು ಸೂಚಿಸುವ ದೃಷ್ಟಿ ದೋಷವನ್ನು ಹೆಸರಿಸಿ ಈ ದೃಷ್ಟಿದೋಷಕ್ಕೆ ಕಾರಣ ಹಾಗೂ ಅದರ ಲಕ್ಷಣಗಳು ಮತ್ತು ಆ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರವನ್ನು ತಿಳಿಸಿ




ಉ : • ಬೆಳಕಿನ ಕಿರಣಗಳು ರೆಟಿನಾದ ಹಿಂಬಾಗದಲ್ಲಿ ಕೇಂದ್ರೀಕೃತವಾಗಿರುವುದರಿಂದ ಇದು ದೂರದೃಷ್ಟಿ ದೋಷವಾಗಿದೆ.

ಕಾರಣ : • ಕಣ್ಣಿನ ಮಸೂರದ ಸಂಗಮದೂರವು ಉದ್ದವಾಗಿರುವುದು

• ಕಣ್ಣುಗುಡ್ಡೆಯು ಅತಿ ಚಿಕ್ಕದಾಗಿರುವುದು.

ಲಕ್ಷಣಗಳು : ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿಲ್ಲ. ದೂರದೃಷ್ಟಿ ಹೊಂದಿದ ವ್ಯಕ್ತಿ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿದೆ.


• ಈ ದೋಷ ನಿವಾರಣೆಗೆ ಪೀನಮಸೂರ ಅವಶ್ಯಕ ಇದೆ.

" yes , i can do it "


www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ




## ಆನಂದ ಬಾಣ




# 47 ಪೋಕ್ಸೋ ಬಾಲ್ಯ ವಿವಾಹ ಪ್ರಕರಣ ದಾಖಲು

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಬಾಲ್ಯ ವಿವಾಹ ತಡೆಗೆ ಕಠಿಣ ಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯಲ್ಲಿ ಬಾಲ್ಯ ವಿವಾಹ ತಡೆಗೆ ಕಠಿಣ ಕ್ರಮ ತೆಗೆದುಕೊಳ್ಳಲಾಗಿದೆ. ಜಿಲ್ಲಾದ್ಯಂತ 47 ಬಾಲ್ಯ ವಿವಾಹ ಪ್ರಕರಣಗಳಲ್ಲಿ ಪೋಕ್ಸೋ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ 'ಬೇಟಿ ಬಚವೋ, ಬೇಟಿ ಪಡಾವೋ ಯೋಜನೆಯ ದಶಮಾನೋತ್ಸವ ನಿಮಿತ್ತ ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯುಕೇಷನ್ ಟ್ರಸ್ಟ್ ಸಹಯೋಗದಲ್ಲಿ ಮಿಷನ್ ಶಕ್ತಿ ಯೋಜನೆಯಡಿ ಬಾಲ್ಯ ವಿವಾಹ ನಿಷೇಧ ಕಾಯ್ದೆ–2006, ಪೋಕ್ಸೋ ಕಾಯ್ದೆ–2012 ಕುರಿತು ಆಯೋಜಿಸಲಾದ ಜಿಲ್ಲಾ ಮಟ್ಟದ ಕಾರ್ಯಗಾರ ಉದ್ಘಾಟಿಸಿ ಅವರು ಗುರುವಾರ ಮಾತನಾಡಿದರು. ಬಾಲ್ಯ ವಿವಾಹ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಬಾಲ್ಯ ವಿವಾಹ ನಿಷೇಧ ಹಾಗೂ ಪೋಕ್ಸೋ ಕಾಯ್ದೆಗಳಲ್ಲಿ ತುಂಬಾ ಕಠಿಣ ಶಿಕ್ಷೆಗಳಿವೆ. ಬಾಲ್ಯ ವಿವಾಹ ಸಂಭವಿಸಿದ ಸಂದರ್ಭದಲ್ಲಿ ಅಪ್ರಾಪ್ತ ಬಾಲಕಿ ಮದುವೆಯಾದ ಯುವಕನ ವಿರುದ್ಧವೇ ಪ್ರಕರಣ ದಾಖಲಿಸಲಾಗುತ್ತದೆ. ಇದರೊಂದಿಗೆ ಕುಟುಂಬ ಸದಸ್ಯರ ವಿರುದ್ಧವು ಕ್ರಮಕೈಗೊಳ್ಳಲಾಗುತ್ತದೆ. ಇದರಿಂದ ಬಾಲ್ಯ ವಿವಾಹ ಮಾಡಿದ ಕುಟುಂಬಗಳು ಹಾಗೂ ಅಪ್ರಾಪ್ತ ಬಾಲಕಿ ಸಹಿತ ಸಂಕಷ್ಟಕ್ಕೆ ಸಿಲುಕುತ್ತಾರೆ. ಬಾಲ್ಯ ವಿವಾಹ ಸಾಮಾಜಿಕ ಪಿಡುಗಾಗಿದೆ. ಅಪ್ರಾಪ್ತ ಬಾಲಕಿಯರು ವೈವಾಹಿಕ ಜೀವನ ನಡೆಸಲು ದೈಹಿಕವಾಗಿ ಸಮರ್ಥರಾಗಿರುವುದಿಲ್ಲ. ಇದರೊಂದಿಗೆ ಬಾಲ ಗರ್ಭಿಣಿಯಾದರೆ ಗರ್ಭದಲ್ಲಿನ ಮಗುವಿಗೂ ಸರಿಯಾದ ಹಾರೈಕೆ ದೊರೆಯುವುದಿಲ್ಲ. ಇದರಿಂದ ಗರ್ಭಪಾತ, ಅವಧಿಗೆ ಮುನ್ನ ಮಗುವಿನ ಜನನ, ಶಿಶು ಮರಣ, ತಾಯಿ ಮರಣ ಸಹ ಸಂಭವಿಸುತ್ತವೆ. ದೇಶದ ಅಭಿವೃದ್ಧಿ ಸೂಚ್ಯಾಂಕ ಪರಿಗಣನೆಯಲ್ಲಿ ತಾಯಿ ಹಾಗೂ ಶಿಶು ಮರಣ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಇದರಿಂದ ದೇಶದ ಅಭಿವೃದ್ಧಿ ಸಹ ಕುಂಠಿತವಾಗುತ್ತದೆ. ಜಿಲ್ಲೆಯಲ್ಲಿ ಎಲ್ಲ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ಸರ್ಕಾರೇತರ ಸಂಘ, ಸಂಸ್ಥೆಗಳು ಬಾಲ್ಯ ವಿವಾಹ ತಡೆಗಟ್ಟಲು ಸಾರ್ವಜನಿಕವಾಗಿ ಸಹಕಾರ ಅಗತ್ಯ. ಕಾನೂನುಗಳನ್ನು ಅನುಷ್ಠಾನ ಮಾಡುವ ಮುನ್ನ ಜನರಿಗೆ ಈ ಕುರಿತು ತಿಳುವಳಿಕೆ ನೀಡುವುದು ಅಗತ್ಯವಾಗಿದೆ. ಆದ್ದರಿಂದ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಸಂಘಟನೆಗಳು, ಮಠ ಮಂದಿರಗಳು ಸಾಮೂಹಿಕ ವಿವಾಹ ನಡೆಸುವ ವೇಳೆ ಮದುವೆಯಾಗುವ ಗಂಡು ಹಾಗೂ ಹೆಣ್ಣಿನ ವಯಸ್ಸನ್ನು ಖಾತ್ರಿ ಪಡಿಸಿಕೊಳ್ಳಬೇಕು. ಇಂತಹ ಸಂದರ್ಭಗಳಲ್ಲಿ ಬಾಲ್ಯ ವಿವಾಹ ನಡೆದಿರುವುದು ಕಂಡುಬಂದರೆ ಆಯೋಜಕರ ಮೇಲೆ ನಿರ್ಧಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಎಚ್ಚರಿಸಿದರು.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಶ್ವೇತ ಪ್ರಾಸ್ತಾವಿಕವಾಗಿ ಮಾತನಾಡಿ, ಕೇಂದ್ರ ಸರ್ಕಾರ ಬೇಟಿ ಬಚವೋ, ಬೇಟಿ ಪಡವೋ ಯೋಜನೆ ಜಾರಿಗೆ ತಂದು ಹತ್ತು ವರ್ಷಗಳು ಸಂದಿವೆ. ಈ ಸಂದರ್ಭದಲ್ಲಿ ಬಾಲ್ಯ ವಿವಾಹ ತಡೆ ಕಾನೂನನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲಾಗಿದೆ. ಹೆಣ್ಣು ಭ್ರೂಣ ಹತ್ಯೆ ತಡೆಗೆ ಕಠಿಣ ಕಾನೂನು ರೂಪಿಸಲಾಗಿದೆ. ಬಾಲ್ಯ ವಿವಾಹ ತಡೆಯುವಲ್ಲಿ ಜನಪ್ರತಿನಿಧಿಗಳು ಹಾಗೂ ಸಂಘ, ಸಂಸ್ಥೆಗಳ ಪಾತ್ರ ಹಿರಿದಾಗಿದೆ. ಈ ಹಿನ್ನಲೆಯಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ–2006, ಪೋಕ್ಸೋ ಕಾಯ್ದೆ–2012 ಕುರಿತು ಅರಿವು ಮೂಡಿಸಲು ಕಾರ್ಯಗಾರ ಹಮ್ಮಿಕೊಳ್ಳಲಾಗಿದೆ. ಈ ಕಾಯ್ದೆಯ ವಿಚಾರಗಳನ್ನು ತೆರದ ಹೃದಯದಿಂದ ಆಲಿಸಿ, ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಮಕ್ಕಳ ಹಕ್ಕುಗಳ ರಕ್ಷಣಾ ಘಟಕದ ನಿಕಟಪೂರ್ವ ಸದಸ್ಯ, ಸಂಪನ್ಮೂಲ ವ್ಯಕ್ತಿ ಹೆಚ್.ಸಿ.ರಾಘವೇಂದ್ರ ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಪೋಕ್ಸೋ ಕಾಯ್ದೆ ಬಗ್ಗೆ ಉಪನ್ಯಾಸ ನೀಡಿದರು.

ಸಭೆಯಲ್ಲಿಮರಿಯಮ್ಮನಹಳ್ಳಿಶ್ರೀಗುರುಪಾದದೇವರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಮುಸ್ಲಿಂ ಧರ್ಮಗುರು ಖಾಜಿ ಸೈಯದ್ ಅಜೀಜುಲ್ಲಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರೂಪಣಾಧಿಕಾರಿ ಸುಭದ್ರದೇವಿ, ಚೈತನ್ಯ ಗ್ರಾಮೀಣಾಭಿವೃದ್ಧಿ ಎಜ್ಯುಕೇಷನ್ ಟ್ರಸ್ಟ್ ನ ಅಧ್ಯಕ್ಷ ಭೀಮರಾಜ.ಯು ಕಾರ್ಯದರ್ಶಿ ಅಶೋಕ ಹಾಜರಿದ್ದರು.

# ಶ್ರೀಗುರುಕೊಟ್ಟೂರೇಶ್ವರ ರಥೋತ್ಸವಕ್ಕೆ ಕೆಎಸ್ಸಾರ್ಟಿಸಿ ವಿಶೇಷ ಸಾರಿಗೆ ಸೌಕರ್ಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಫೆಬ್ರವರಿ 22 ರಂದು ಜರುಗಲಿರುವ ಕೊಟ್ಟೂರು ಶ್ರೀ ಗುರುಬಸವೇಶ್ವರ ಸ್ವಾಮಿಯ ರಥೋತ್ಸವಕ್ಕೆ ವಿಜಯ ನಗರ ಜಿಲ್ಲೆಯ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ವಿಭಾಗದಿಂದ ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ಭಾಗಗಳಿಂದ ಫೆ.21 ರಿಂದ ಫೆ.23 ರವರೆಗೆ ವಿಶೇಷ ಸಾರಿಗೆ ಸೌಕರ್ಯವನ್ನು ಕಲ್ಪಿಸಲಾಗಿದೆ. ಸಾರ್ವಜನಿಕರು, ಪ್ರಯಾಣಿಕರು, ಭಕ್ತಾದಿಗಳು ಈ ಸಾರಿಗೆಸೌಕರ್ಯದಸದುಪಯೋಗಪಡೆದುಕೊಳ್ಳಬೇಕು ಎಂದು ಹೊಸಪೇಟೆ ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಂದಾಲ್ ನಲ್ಲಿ ಬೃಹತ್ ರಕ್ತದಾನ ಶಿಬಿರಕ್ಕೆ ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಚಾಲನೆ

# ಅಮೂಲ್ಯ ಜೀವ ಉಳಿಸಲು ರಕ್ತದಾನ ಮಾಡಿ



■ **ಹಂಪಿ ಟೈಮ್ಸ್ ಬಳ್ಳಾರಿ**

ಸಂಡೂರಿನ ತೋರಣಗಲ್ಲು ಬಳಿಯ ಜಿಂದಾಲ್ ನಲ್ಲಿ ಫೆ.20 ರಿಂದ ಮೂರು ದಿನಗಳ ಕಾಲ ನಡೆಯಲಿರುವ ಬೃಹತ್ ರಕ್ತದಾನ ಶಿಬಿರಕ್ಕೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಗುರುವಾರ ಒಪಿಜೆ ಸೆಂಟರ್ ಸಭಾಂಗಣದಲ್ಲಿ ಚಾಲನೆ ನೀಡಿದರು.

ಕೃತಕವಾಗಿ ತಯಾರಿಸಲು ಸಾಧ್ಯವಾಗದ ರಕ್ತವನ್ನು ಮತ್ತೊಬ್ಬರಿಗೆ ನೀಡಿ ಜೀವ ಉಳಿಸುವಂಥ ಕೆಲಸ ನಿಜಕ್ಕೂ ಶ್ರೇಷ್ಠವಾಗಿದ್ದು, 18 ವರ್ಷ ತುಂಬಿದ ಎಲ್ಲಾ ಅರ್ಹರು ತಪ್ಪದೇ ರಕ್ತದಾನ ಮಾಡಬೇಕು ಎಂದು ಕರೆ ನೀಡಿದರು. ಜಿಲ್ಲೆಯಲ್ಲಿ ರಕ್ತದಾನ ಶಿಬಿರಗಳು ಕ್ಷೀಣಿಸುತ್ತಿದ್ದವು. ವರ್ಷವಾರು ನಿಗದಿತ ಗುರಿಗಿಂತ ಕಡಿಮೆ ಸಂಗ್ರಹವಿದೆ. ಇದಕ್ಕೆ ಪ್ರೋತ್ಸಾಯಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ನಿರ್ವಹಣಾ ಘಟಕ ಇವರೊಂದಿಗೆ ಜೆಎಸ್‌ಡಬ್ಲ್ಯು ಜಿಂದಾಲ್ ಸಹಯೋಗದಲ್ಲಿ ಜಿಂದಾಲ್ ಆವರಣದ ವಿವಿಧ 15 ಸ್ಥಳಗಳಲ್ಲಿ ರಕ್ತ ಭಂಡಾರ ಮೂಲಕ ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ತುರ್ತು ಸಂದರ್ಭದಲ್ಲಿ ಜೀವ ಉಳಿಸಲು ಹಾಗೂ ರಕ್ತದ ಕೊರತೆ ತಗ್ಗಿಸಲು ರಕ್ತದಾನ ಶಿಬಿರವು ಫೆ.22 ರ ವರೆಗೆ ನಡೆಯಲಿದ್ದು, ಈ ಬೃಹತ್ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ಪ್ರತಿಯೊಬ್ಬರೂ ರಕ್ತದಾನ ಮಾಡಬಹುದು ಎಂದರು.

ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ನಿರ್ವಹಣಾ ಘಟಕ ಅಧಿಕಾರಿ ಡಾ. ಇಂದ್ರಾಣಿ.ವಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮಲ್ಲಿನ ಎಲ್ಲಾ ಅಂಗಾಂಗ ಗಳನ್ನು ದಾನ ಮಾಡಬಹುದಾಗಿದ್ದು, ಅದರಲ್ಲಿ ರಕ್ತದಾನ ಬಹುಮುಖ್ಯವಾಗಿದೆ. ಜಿಲ್ಲೆಯ ಬಿಮ್ಸ್ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆ ಮತ್ತು ಇತರೆ ರಕ್ತ ಕೇಂದ್ರಗಳಲ್ಲಿ ಅತಿ ಅವಶ್ಯಕವಾಗಿದೆ ಎಂದರು.

ಅಪಘಾತಗಳಿಂದ ಗಾಯಗೊಂಡವರಿಗೆ ಹಾಗೂ ರಕ್ತಹೀನತೆಯಿಂದ ಬಳಲುವ ಗರ್ಭಿಣಿಯರಿಗೆ, ಹೆರಿಗೆ ಸಂದರ್ಭದಲ್ಲಿ ಗರ್ಭಿಣಿಯರಿಗೆ ಮತ್ತು ಥಲಸೀಮಿಯಾ ದಂತಹಕಾಯಿಲೆಯಿಂದಬಳಲುತ್ತಿರುವವರಿಗೆ ನಿರಂತರವಾಗಿ ರಕ್ತದ ಅವಶ್ಯಕತೆ ಇದೆ. ರಕ್ತದಾನದಿಂದ ನಮ್ಮ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಗೆ ನಿರಂತರವಾಗಿ ಸಹಕಾರಿಯಾಗಲಿದೆ. ಈ ಶಿಬಿರದಲ್ಲಿ 5000 ರಕ್ತ ಯುನಿಟ್ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಈ ವರ್ಷದಲ್ಲಿ ಒಟ್ಟು 13,792 ರಕ್ತ ಯುನಿಟ್ ಸಂಗ್ರಹ ಮಾಡುವ ಗುರಿ ಇದ್ದು, ಈವರೆಗೆ 6000 ರಕ್ತ ಯುನಿಟ್ ಸಂಗ್ರಹ ಮಾಡಲಾಗಿದೆ ಎಂದು ಅವರು ತಿಳಿಸಿದರು.

18 ವರ್ಷ ತುಂಬಿದ ಎಲ್ಲಾ ಅರ್ಹ ಪುರುಷ ಮತ್ತು ಮಹಿಳೆಯರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಜಿಲ್ಲೆಯಲ್ಲಿ ರಕ್ತದ ಕೊರತೆ ನೀಗಿಸಿ ಜೀವ ಉಳಿಸುವ ಕಾರ್ಯಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

**ರಕ್ತದಾನ ಶಿಬಿರ ನಡೆಯುವ ಸ್ಥಳ:**

ಜಿಂದಾಲ್‌ನ ಒಪಿಜೆ ಸೆಂಟರ್‌ನ ತಮನ್ನಾ ಶಾಲೆ, ಜಿಂದಾಲ್ ಸಂಜೀವಿನಿ ಆಸ್ಪತ್ರೆ, ವಿದ್ಯಾನಗರದ ಆರೋಗ್ಯ ಕೇಂದ್ರ ಮತ್ತು ಲಿಟಲ್ ಎಲ್ಲೆ, ಹೆಚ್‌ಎಸ್‌ಟಿ ಕಾಂಪ್ಲೆಕ್ಸ್, ಸಿಆರ್‌ಎಂ–1 ಪ್ಲ್ಯಾಂಟ್, ಲಾಜಿಸ್ಟಿಕ್ ಪ್ಲಾಂಟ್, ಎಸ್‌ಎಂಎಸ್–4 ಪ್ಲ್ಯಾಂಟ್, ಹೆಚ್‌ಆರ್‌ಡಿ ಪ್ಲ್ಯಾಂಟ್, ಜೆಎಸ್‌ಎಂಎಸ್‌ಹೆಚ್‌ನ ಸ್ಟೆಪ್‌ಡೌನ್ ಐಸಿಯು ಮತ್ತು ಜೆಎಸ್‌ಡಬ್ಲ್ಯು ಎನರ್ಜಿ ಸಭಾಂಗಣದಲ್ಲಿ ಬೆಳಿಗ್ಗೆ 09 ಗಂಟೆಯಿಂದ ಸಂಜೆ 04.30 ಗಂಟೆಯವರೆಗೆ ನಡೆಯಲಿದೆ.

**ಸಾರ್ವಜನಿಕರಿಗೆ ಅವಕಾಶ:**

ತೋರಣಗಲ್ಲು ನ ಒಪಿಜೆ ಜಿಂದಾಲ್ ತಮನ್ನಾ ಶಾಲೆ ಆವರಣ ಮತ್ತು ಜಿಂದಾಲ್ ಸಂಜೀವಿನಿ ಆಸ್ಪತ್ರೆ ಆವರಣ ಸೇರಿ ಈ ಎರಡು ಸ್ಥಳದಲ್ಲಿ ಸಾರ್ವಜನಿಕರಿಗೆ ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಲು ಅವಕಾಶವಿದ್ದು, ಮೂರು ದಿನಗಳ ಕಾಲ ತಪ್ಪದೇ ಆಗಮಿಸಿ ರಕ್ತದಾನ ಮಾಡಬಹುದು ಎಂದು ತಿಳಿಸಿದರು.

ನೋಂದಣಿಗಾಗಿ ಮೊ.7829012277, 8039542124, 08395–42222, 99453 67894, 9686595215 ಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು ಎಂದರು.

ಬಳಿಕ ರಕ್ತದಾನಿಗಳಿಗೆ ಪ್ರಮಾಣ ಪತ್ರ, ಕಿರು ಆಹಾರ ಕಿಟ್ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಜಿಂದಾಲ್ ತೋರಣಗಲ್ಲಿನ ಕಾರ್ಯನಿರ್ವಾಹಕ ಉಪಾಧ್ಯಕ್ಷ ಮಯೂರೇಶ್ ಬಾಪತ್, ಉಪಾಧ್ಯಕ್ಷ(ಆಡಳಿತ) ಸುನೀಲ್ ರಾಲ್ಫ್, ಸಿಎಸ್‌ಆರ್ ಮುಖ್ಯಸ್ಥ ಪೆದ್ದಣ್ಣ, ಸಂಜೀವಿನಿ ಆಸ್ಪತ್ರೆಯ ಮುಖ್ಯಸ್ಥ ಡಾ.ಸುನೀಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬಳ್ಳಾರಿವ ವಿಮ್ಸ್‌ಗೆ ಬಿಎಂಸಿಆರ್‌ಸಿ ನಾಮಕರಣ

■ **ಹಂಪಿ ಟೈಮ್ಸ್ ಬಳ್ಳಾರಿ :** ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ವಿಮ್ಸ್) ಹೆಸರನ್ನು ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರ (ಬಿಎಂಸಿಆರ್‌ಸಿ) ಎಂದು ಹೆಸರು ಬದಲಾಯಿಸಿ ಸರ್ಕಾರವು ಆದೇಶಿಸಿದೆ ಎಂದು ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರ (ಬಿಎಂಸಿಆರ್‌ಸಿ) ದ ಡೀನ್ ಹಾಗೂ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Place Your Advertisements
in Hampi Times
Call us for more info.
94486 33038

